ಸಿರಿಗನ್ನಡಂ ಗೆಲ್ಗೆ ॥ ಜೈ ಶ್ರೀ ಗುರುದೇವ್ ॥ ಸಿರಿಗನ್ನಡಂ ಬಾಳ್ಗೆ

ಶ್ರೀ ಆದಿಚುಂಚನಗಿರಿ ಟ್ರಸ್ಟ್ (ರಿ)



# ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ



ಅಂಚೆ ಪೆಟ್ಟಿಗೆ ಸಂಖ್ಯೆ 20, ಬಿ ಬಿ ರಸ್ತೆ, ಚಿಕ್ಕಬಳ್ಳಾಪುರ

# ಚಿರವಿನೂತನ ಕನ್ನಡ ಸಂಘ

## "ತಾಂತ್ರಿಕ ಮನಸಿನಂಚಿನಲಿ ಕನ್ನಡದ ಸಿಂಚನ"

## ಸಂಚಿಕೆ–3






ಸಿರಿಗನ್ನಡಂ ಗೆಲ್ಗೆ
ಕನ್ನಡವೇ ಸತ್ಯ ಕನ್ನಡವೇ ನಿತ್ಯ
ಸಿರಿಗನ್ನಡಂ ಬಾಳ್ಗೆ
॥ ಜೈ ಶ್ರೀ ಗುರುದೇವ್ ॥
ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ)
ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ
ಚಿಕ್ಕಬಳ್ಳಾಪುರ – 562 101
ಚಿರವಿನೂತನ
ಸ್ಥಾಪನೆ : 1986
ತಾಂತ್ರಿಕ ಮನಸಿನಂಚಿನಲಿ ಕನ್ನಡದ ಸಿಂಚನ
ಸ್ಥಾಪನೆ : 2021
ವಿಜಯೋತ್ಸವ – 2023
ದಿನಾಂಕ: 15.12.2023, ಶುಕ್ರವಾರ
ಸಮಯ: ಬೆಳಿಗ್ಗೆ 09.30. ಗಂಟೆಗೆ
ಸ್ಥಳ: ಕಾಮಗಾರಿ ವಿಭಾಗದ ಸಭಾಂಗಣ
ಎಸ್ ಜೆ ಸಿ ಐ ಟಿ
ಸರ್ವರಿಗೂ ಆದರದ ಸುಸ್ವಾಗತ
ಆಡಳಿತ ಮಂಡಳಿ, ಪ್ರಾಂಶುಪಾಲರು, ವಿಭಾಗದ ಮುಖ್ಯಸ್ಥರುಗಳು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿವೃಂದದವರು


॥ ಜೈ ಶ್ರೀ ಗುರುದೇವ್ ॥
ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ)
ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ
ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ
ಚಿಕ್ಕಬಳ್ಳಾಪುರ – 562 101
ಚಿರವಿನೂತನ
ತಾಂತ್ರಿಕ ಮನಸಿನಂಚಿನಲಿ ಕನ್ನಡದ ಸಿಂಚನ
ಕನ್ನಡ ರಾಜ್ಯೋತ್ಸವ
ಹಾಗೂ
ರಾಷ್ಟ್ರಕವಿ ಕುವೆಂಪು ರವರ 119ನೇ ಜನ್ಮದಿನಾಚರಣೆ
ದಿನಾಂಕ : 29-12-2023, ಶುಕ್ರವಾರ | ಸಮಯ : ಬೆಳಗ್ಗೆ 10.00 ಗಂಟೆಗೆ | ಸ್ಥಳ : ಬಿ.ಬಿ.ಎಸ್ ಸಭಾಂಗಣ, ಎಸ್.ಜೆ.ಸಿ.ಐ.ಟಿ
ಸರ್ವರಿಗೂ ಆದರದ ಸುಸ್ವಾಗತ
ಆಡಳಿತ ಮಂಡಳಿ, ಪ್ರಾಂಶುಪಾಲರು, ವಿಭಾಗದ ಮುಖ್ಯಸ್ಥರುಗಳು, ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿ ವೃಂದದವರು

|| ಸಿರಿಗನ್ನಡಂ ಗೆಲ್ಗೆ || || ಜೈ ಶ್ರೀ ಗುರುದೇವ್ || || ಸಿರಿಗನ್ನಡಂ ಬಾಳ್ಗೆ ||





ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ)

# ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ

ಚಿಕ್ಕಬಳ್ಳಾಪುರ – 562101

ESTD 1986



# ಚಿರನೂತನ

ತಾಂತ್ರಿಕ ಮನಸಿನಂಚಿನಲಿ ಕನ್ನಡದ ಸಿಂಚನ

## ಕನ್ನಡ ರಾಜ್ಯೋತ್ಸವ
ಹಾಗೂ
## ರಾಷ್ಟ್ರಕವಿ ಕುವೆಂಪು ರವರ ೧೧೯ನೇ ಜನ್ಮದಿನಾಚರಣೆ

29–12–2023, ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ | ಸ್ಥಳ : ಬಿ.ಜಿ.ಎಸ್. ಸಭಾಂಗಣ, ಎಸ್‌ಜೆಸಿಐಟಿ

**ಪರಮಪೂಜ್ಯ ಜಗದ್ಗುರು ಪದ್ಮಭೂಷಣ**
**ಶ್ರೀ ಶ್ರೀ ಶ್ರೀ ಡಾ|| ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ**
ದಿವ್ಯಾಶೀರ್ವಾದಗಳೊಂದಿಗೆ

### ದಿವ್ಯ ಸಾನಿಧ್ಯ ಮತ್ತು ಆಶೀರ್ವಚನ

ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಪರಮಪೂಜ್ಯ ಜಗದ್ಗುರು
**ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು**
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

### ಸಾನಿಧ್ಯ

**ಪೂಜ್ಯ ಶ್ರೀ ಶ್ರೀ ಮಂಗಳನಾಥ ಸ್ವಾಮೀಜಿಯವರು**
ಕಾರ್ಯದರ್ಶಿಗಳು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠ, ಚಿಕ್ಕಬಳ್ಳಾಪುರ

### ಮುಖ್ಯ ಅತಿಥಿಗಳು

**ಡಾ|| ಶಮಿತಾ ಮಲ್ನಾಡ್**
ಖ್ಯಾತ ಚಲನಚಿತ್ರ ಗಾಯಕರು

**ಕು|| ನಿಶ್ಚಿತ**
ನಟಿ, ಭರತನಾಟ್ಯ ಕಲಾವಿದರು

**ಶ್ರೀ ಪ್ರದೀಪ್ ದೊಡ್ಡಯ್ಯ**
ನಟರು, ವಾಗ್ಮಿ

**ಕು|| ಹೃತಿಕಾ ಶ್ರೀನಿವಾಸ್**
ಖ್ಯಾತ ನಟಿ

### ಗೌರವಾನ್ವಿತ ಅತಿಥಿಗಳು

**ಶ್ರೀ ಅಂಜನಪ್ಪ**
ಖ್ಯಾತ ಮುಖವೀಣೆ ಕಲಾವಿದರು

**ಪದ್ಮಶ್ರೀ ನಾಡೋಜ ಡಾ. ಮುನಿವೆಂಕಟಪ್ಪ**
ಖ್ಯಾತ ತಮಟೆ ಕಲಾವಿದರು

### ಉಪಸ್ಥಿತಿ

**ಡಾ|| ಎನ್. ಶಿವರಾಮರೆಡ್ಡಿ**
ಮುಖ್ಯ ಆಡಳಿತಾಧಿಕಾರಿಗಳು ಬಿ.ಜಿ.ಎಸ್. ಸಮೂಹ ಸಂಸ್ಥೆಗಳು, ಚಿಕ್ಕಬಳ್ಳಾಪುರ ವಿಭಾಗ

ಆಡಳಿತ ಮಂಡಳಿ, ಪ್ರಾಂಶುಪಾಲರು, ವಿಭಾಗದ ಮುಖ್ಯಸ್ಥರುಗಳು. ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿ ವೃಂದದವರು

ಸರ್ವ ಸಹೃದಯರಿಗೂ ಸವಿನಯ ಆಮಂತ್ರಣ


॥ ಸಿರಿಗನ್ನಡಂ ಗೆಲ್ಗೆ ॥
॥ ಜೈ ಶ್ರೀ ಗುರುದೇವ್ ॥
॥ ಸಿರಿಗನ್ನಡಂ ಬಾಳ್ಗೆ ॥
ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ)
ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ
ಚಿಕ್ಕಬಳ್ಳಾಪುರ – 562101
ಚಿರನೂತನ
ತಾಂತ್ರಿಕ ಮನಸಿನಂಚಿನಲಿ ಕನ್ನಡದ ಸಿಂಚನ
ಕನ್ನಡ ರಾಜ್ಯೋತ್ಸವ
ಹಾಗೂ
ರಾಷ್ಟ್ರಕವಿ ಕುವೆಂಪು ರವರ ೧೧೯ನೇ ಜನ್ಮದಿನಾಚರಣೆ
ಮುಖ್ಯ ಅತಿಥಿಗಳು
ಗೌರವಾನ್ವಿತ ಅತಿಥಿಗಳು
ಡಾ॥ ಶಮಿತಾ ಮಲ್ನಾಡ್
ಖ್ಯಾತ ಚಲನಚಿತ್ರ ಗಾಯಕರು
ಕು॥ ನಿಶ್ಚಿತ
ನಟಿ, ಭರತನಾಟ್ಯ ಕಲಾವಿದರು
ಶ್ರೀ ಪ್ರದೀಪ್ ದೊಡ್ಡಯ್ಯ
ನಟರು, ವಾಗ್ಮಿ
ಕು॥ ಹೃತಿಕಾ ಶ್ರೀನಿವಾಸ್
ಖ್ಯಾತ ನಟಿ
ಶ್ರೀ ಆಂಜನಪ್ಪ
ಖ್ಯಾತ ಮುಖವೀಣೆ ಕಲಾವಿದರು
ಪದ್ಮಶ್ರೀ ನಾಡೋಜ
ಡಾ. ಮುನಿವೆಂಕಟಪ್ಪ
ಖ್ಯಾತ ತಮಟೆ ಕಲಾವಿದರು
ದಿನಾಂಕ : 29-12-2023, ಶುಕ್ರವಾರ ಬೆಳಗ್ಗೆ 10.00 ಗಂಟೆಗೆ । ಸ್ಥಳ : ಬಿ.ಜಿ.ಎಸ್. ಸಭಾಂಗಣ, ಎಸ್‌ಜೆಸಿಐಟಿ
ಸರ್ವ ಸಹೃದಯರಿಗೂ ಸವಿನಯ ಆಮಂತ್ರಣ
ಆಡಳಿತ ಮಂಡಳಿ, ಪ್ರಾಂಶುಪಾಲರು, ವಿಭಾಗದ ಮುಖ್ಯಸ್ಥರುಗಳು, ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿ ವೃಂದದವರು

# ಪರಿವಿಡಿ

1. ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.)
2. ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
3. ಶುಭ ಸಂದೇಶ
4. ಶ್ರೀ ಶ್ರೀ ಮಂಗಳನಾಥ ಸ್ವಾಮೀಜಿಯವರು
5. ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯದ ಪರಿಚಯ
6. ಸಂಘದ ಸದಸ್ಯರು
7. ಪ್ರಾಂಶುಪಾಲರ ನುಡಿ
8. ಸಂಪಾದಕರ ನುಡಿ
9. ಕುಲಸಚಿವರ ಸಂದೇಶ
10. ಕುವೆಂಪುರವರ ಪರಿಚಯ
11. ಸರ್. ಎಂ ವಿಶ್ವೇಶ್ವರಯ್ಯನವರ ಪರಿಚಯ
12. ಕವನಗಳು
13. ಚರ್ಚಾ ಸ್ಪರ್ಧೆ
14. ಚಿತ್ರಕಲೆ ಸ್ಪರ್ಧೆ
15. ರಂಗೋಲಿ ಸ್ಪರ್ಧೆ
16. ರಸಪ್ರಶ್ನೆ
17. ಮಾತಾಡ್ ಮಾತಾಡ್ ಕನ್ನಡ
18. ಬೆಂಕಿ ಇಲ್ಲದೆ ಅಡುಗೆ
19. ವೇಷಭೂಷಣ ಸ್ಪರ್ಧೆ
21. ನಾಟಕ
22. ಸಮೂಹ ಗಾಯನ ಮತ್ತು ಸಮೂಹ ನೃತ್ಯ
23. ಕನ್ನಡ ರಾಜ್ಯೋತ್ಸವ 2023



ಪರಮಪೂಜ್ಯ ಜಗದ್ಗುರು ಪದ್ಮಭೂಷಣ

## ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾ ಸ್ವಾಮೀಜಿಯವರು

ಭೈರವೈಕ್ಯೆ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಪದ್ಮಭೂಷಣ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಶ್ರೀ ಆದಿಚುಂಚನಗಿರಿ ಶ್ರೀ ಮಠದ ಸಂಸ್ಥಾಪಕ ಅಧ್ಯಕ್ಷರು ಹಾಗೂ 71ನೇ ಪೀಠಾಧ್ಯಕ್ಷರು. ಶ್ರೀ ಆದಿಚುಂಚನಗಿರಿ ಮಠವು ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದ್ದರೂ ಅದರ ಖ್ಯಾತಿ ಹಾಗೂ ಸೇವೆ ಲೋಕವಿಸ್ತಾರಗೊಂಡುದು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಪದ್ಮಭೂಷಣ ಡಾ। ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಶ್ರೀ ಮಠದ ಸಿದ್ಧಸಿಂಹಾಸನವನ್ನು ಆಲಂಕರಿಸಿದ ಮೇಲೆಯೇ ಎಂಬುದು ಸರ್ವರಿಗೂ ತಿಳಿದಿರುವ ಸಂಗತಿ. ಸ್ವಾಮೀಜಿಯವರು ಶ್ರೀಮಠದ ಸಿದ್ಧಸಿಂಹಾಸನವನ್ನೇರಿದ ಆ ಅಮೃತ ಘಳಿಗೆ ಶ್ರೀಮಠದ ಇತಿಹಾಸದಲ್ಲಿ ಹೊಸ ಮನ್ವಂತರಕ್ಕೆ ನಾಂದಿಯಾಯಿತು. ಭೈರವನ ಭಕ್ತರಿಗಷ್ಟೇ ಸೀಮಿತವಾಗಿದ್ದ ಶ್ರೀ ಕ್ಷೇತ್ರವನ್ನು ಕೇವಲ ಮೂರೂವರೆ ದಶಕಗಳಲ್ಲಿ ಮಹಾಕ್ಷೇತ್ರವನ್ನಾಗಿಸಿ. ಅದನ್ನೊಂದು ಮಹಾನ್ ಧರ್ಮಪೀಠವನ್ನಾಗಿ ರೂಪಿಸಿದರು. ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ತ್ರಿವಿಧ ದಾಸೋಹಿಗಳೆಂದೇ ಜನ-ಮನದಲ್ಲಿ ನೆಲೆಯಾಗಿರುವ ಸ್ವಾಮೀಜಿಯವರು, ಹಲವು ಹತ್ತು ಕ್ಷೇತ್ರಗಳಲ್ಲಿ ತಮ್ಮ ಅವಿಸ್ಮರಣೀಯ ಸೇವೆಗಳ ಮೂಲಕ ನಾಡಿನ ಶ್ರೇಯೋಭಿವೃದ್ಧಿಯ ಸಂಕಲ್ಪ ಮಾಡಿ ಅವುಗಳನ್ನೆಲ್ಲ ಸಾಕಾರಗೊಳಿಸಿದ್ದಾರೆ ಇವರು ಸೇವೆ ಮಾಡುವ ಬಯಕೆಯಿಂದ ಪ್ರೇರಿತರಾಗಿ ಆದಿಚುಂಚನಗಿರಿ ಮಠದ ಆಶ್ರಿತರಾದರು ದೇಶವಾಸಿಗಳು ಮತ್ತು ಆಧ್ಯಾತ್ಮಿಕತೆಯ ಹಾದಿಯಲ್ಲಿ 19ನೇ ವಯಸ್ಸಿನಲ್ಲಿ ದೀಕ್ಷೆಯನ್ನು ಪಡೆದರು ಮತ್ತು ಶ್ರೀ ಶ್ರೀ ಶ್ರೀ ರಮಾನಂದನಾಥ ಮಹಾಸ್ವಾಮೀಜಿಯವರ ಗುರುವಾಗಿ ಅವರ ಮಾರ್ಗದರ್ಶನದಲ್ಲಿ ವೇದ ಉಪನಿಷತ್ತುಗಳು ಮತ್ತು ಪ್ರಾಚೀನ ಭಾರತೀಯ ಗ್ರಂಥಗಳ ಜ್ಞಾನವನ್ನು ಪಡೆದರು ಅವರು. ಧರ್ಮ ಪೀಠ ಮತ್ತು ಮಠದ ಆಧ್ಯಾತ್ಮಿಕ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಸಮಾಜವನ್ನು ಕ್ರಾಂತಿಗೊಳಿಸುವ ಅವರ ದೃಷ್ಟಿಕೋನವನ್ನು ಸಾಕಾರಗೊಳಿಸಲು ಅವಿರತವಾಗಿ ಶ್ರಮಿಸಿದ ಅವರು ಪ್ರಪಂಚದಾದ್ಯಂತ ಮತ್ತು ದೇಶಾದ್ಯಂತ ಸಂಚರಿಸಿ ಜನರ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವ ಚಟುವಟಿಕೆಯನ್ನು ಹೊಂದಿದ್ದರು ರಾಷ್ಟ್ರದ ಸಮಗ್ರ ಅಭಿವೃದ್ಧಿ ಮತ್ತು ಪ್ರಗತಿಯನ್ನು ಗುರಿಯಾಗಿಟ್ಟುಕೊಂಡು ವಿವಿಧ ಉಪಕ್ರಮಗಳನ್ನು ಕೈಗೊಳ್ಳಲು ಗ್ರಹಜ್ಞಾನ ಮತ್ತು ಕರ್ಮ ಪಥಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಮಾತ್ರ ಈ ಉದ್ದೇಶವನ್ನು ಸಾಧಿಸಬಹುದು ಭಗವದ್ಗೀತೆಯ ಪ್ರಸಿದ್ಧ ಗ್ರಂಥದಲ್ಲಿ ವಿವರಿಸಿದಂತೆ ಸ್ವಾಮೀಜಿಯವರು ಸನ್ಯಾಸಿಯಾಗಿ ತಮ್ಮ ಇಡೀ ಜೀವನವನ್ನು ಇತರರ/ಸಮಾಜದ ಸೇವೆಗಾಗಿ ಮುಡಿಪಾಗಿಟ್ಟರು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಅನ್ನು ಬಲಪಡಿಸುವುದು ಜೊತೆಗೆ ಸುಮಾರು 150000 ವಿದ್ಯಾರ್ಥಿಗಳಗೋಸ್ಕರ 500 ಕ್ಕಿಂತ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ.

ಅರೆ-ನಗರ ಮತ್ತು ಗ್ರಾಮೀಣ ಪ್ರದೇಶದ ಯುವಜನರ ಮೇಲೆ ವಿಶೇಷ ಗಮನಹರಿಸುವ ಮೂಲಕ ದೇಶದಾದ್ಯಂತ ವಿದ್ಯಾರ್ಥಿಗಳು ಪ್ರಾಥಮಿಕಶಾಲೆದಿಂದ ವೃತ್ತಿಪರ/ವೈದ್ಯಕೀಯ ವಿದ್ಯಾಭ್ಯಾಸದವರೆಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದಾರೆ. ಮಹಾಸ್ವಾಮೀಜಿಯವರು ಆಧ್ಯಾತ್ಮಿಕತೆ. ಅನ್ನ (ಉಚಿತ ಆಹಾರ) ಅಕ್ಷರ, ಆರೋಗ್ಯ, ಆಶ್ರಯ. ಅನುಕಂಪ (ಸಹಾಯ ಕೈಗಳು), ಅರಣ್ಯ, ಆಕಳು (ಜಾನುವಾರು ರಕ್ಷಣೆ) ಎಂಬ ಎಂಟು ಕ್ಷೇತ್ರಗಳಲ್ಲಿ ಮಾನವೀಯತೆಯ ಸೇವೆ ಮಾಡುವ ದೃಷ್ಟಿಯನ್ನು ಹೊಂದಿದ್ದರು ಪರರ ಹಿತಕ್ಕಾಗಿ ತಮ್ಮ ಜೀವನದ ಮೂಲಕ ನಿಷ್ಕಾಮ ಕರ್ಮ ಮಾಡಿ, ತನ್ಮೂಲಕ ಭಗವಂತನನ್ನು ತುಷ್ಟಿಗೊಳಿಸುವುದರಲ್ಲಿಯೇ ಬದುಕಿನ ಸಾರ್ಥಕತೆ ಇದೆ. ಎಂಬುದನ್ನು ತಮ್ಮ ಬಾಳಿನ ಮೂಲಕ ತೋರಿಸಿದ್ದಾರೆ. "ಸರ್ವೇ ಜನಾಃ ಸುಖಿನೋ ಭವಂತು" ಎಂಬ ವಿಶಾಲ ಮನೋಭೂಮಿಕೆಯನ್ನೊಂದಿ ತಮ್ಮ ಜೀವಿತಾವಧಿಯ ಸಂಪೂರ್ಣ ಸಮಯವನ್ನು ಸಮಾಜದ ಸಾರ್ವಕಾಲಿಕ ಒಳಿತಿನ ದಿಸೆಯಲ್ಲಿ ತೊಡಗಿಸಿಕೊಂಡು ತಾವು ಕಂಡ ಕನಸನ್ನು ನನಸು ಮಾಡಿದ್ದಾರೆ.



ಪರಮಪೂಜ್ಯ ಜಗದ್ಗುರು

## ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಾಥಪರಂಪರೆಯ 72ನೇ ಪೀಠಾಧ್ಯಕ್ಷರಾದ ಅನ್ನದಾಸೋಹಿ, ಶಿಕ್ಷಣ ಸಂತ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು 20 ಜುಲೈ 1969ರಲ್ಲಿ ಜನಿಸಿದರು ಶ್ರೀ ಭಕ್ತನಾಥ ಮಹಾಸ್ವಾಮೀಜಿ, ಶ್ರೀ ಚಂದ್ರಶೇಖರನಾರ ಮಹಾಸ್ವಾಮೀಜಿ, ಶ್ರೀ ರಮಾನಂದನಾಥ ಮಹಾಸ್ವಾಮೀಜಿ ಮತ್ತು ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ವಂಶಾವಳಿಯಲ್ಲಿ 1800 ವರ್ಷಗಳ ಐತಿಹಾಸಿಕ ಸಂಪ್ರದಾಯವನ್ನು ಹೊಂದಿರುವ ನಾಥ ಪರಂಪರೆಯ ಉತ್ತರಾಧಿಕಾರಿಗಳು ಪ್ರಸ್ತುತ ಪ್ರಕಾಶಿತ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಶ್ರೀ ಮಠದ 72ನೇ ಪೀಠಾಧ್ಯಕ್ಷರು ಇವರು ತಮ್ಮ ಹಿಂದಿನವರು ವಿವರಿಸಿದ ಹೆಜ್ಜೆಗಳನ್ನು ಎಸ್ಮಯದಿಂದ ಅನುಸರಿಸುತ್ತಾರೆ ಮತ್ತು ಮಠ ನಡೆಸಿದ ಉತ್ತಮ ಕಾರ್ಯಗಳನ್ನು ಮುಂದುವರಿಸಲು ಮತ್ತು ಜಾಗತಿಕ ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಅದನ್ನು ವಿಸ್ತರಿಸಲು ಯೋಜಿಸಿದ್ದಾರೆ. ವೈಯಕ್ತಿಕ ಲಾಭಗಳ ಮೇಲೆ ಕೇಂದ್ರೀಕರಿಸುವ ಬದಲು ಸಾಮೂಹಿಕ ಪ್ರಗತಿಯ ಮೇಲೆ ಕೇಂದ್ರೀಕರಿಸುವವನು ನಿಜವಾದ ನಾಯಕರಾಗಿದ್ದಾರೆ.

ಭೈರವ್ಯಕ್ಕೆ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ ಬಾಲಗಂಗಾಧರನಾಥರನ್ನು ಪ್ರತಿಪಾದಿಸುವುದು ಜೊತೆಗೆ ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ಮಾರ್ಗವನ್ನು ಅನುಸರಿಸುವ ಮೂಲಕ ಸಮಗ್ರ ಅಭಿವೃದ್ಧಿ ಯಲ್ಲಿ ಬದುಕುತ್ತಾರೆ ಹಾಗೆಯೇ ಮಹಾಸ್ವಾಮೀಜಿಯವರು ಧಾರ್ಮಿಕ ಮತ್ತು ಪ್ರಬುದ್ಧ ನಾಗರೀಕ ಏಕತೆಗಾಗಿ ಪ್ರತಿಷ್ಠಾನವನ್ನು ಕರೆದಿದ್ದಾರೆ ಮತ್ತು ಭಾರತೀಯ ಆಧ್ಯಾತ್ಮಿಕ ಚಳುವಳಿಯ ಚಟುವಟಿಕೆಗಳ ಒಕ್ಕೂಟವಾದ ಹಿಂದೂ ಧರ್ಮ ಆಚಾರ್ಯ ಸಭೆಯೊಂದಿಗೆ ಸಕ್ರಿಯವಾಗಿ ಸಂಬಂಧ ಹೊಂದಿದ್ದಾರೆ ಇಂಜಿನಿಯರಿಂಗ್ ನಲ್ಲಿನ ಆಸಕ್ತಿಯ ಆಧುನಿಕ ತಂತ್ರಜ್ಞಾನಗಳನ್ನು ಮೂಲಕ ಸಂಯೋಜಿಸಿ ಶಿಕ್ಷಣ ಟ್ರಸ್ಟ್ ನ ಎಲ್ಲಾ ಸಂಸ್ಥೆಗಳ ಕಾರ್ಯ ನಿರ್ವಹಣೆಯನ್ನು ಕ್ರಾಂತಿಗೊಳಿಸಿದೆ.

ಸಂಸ್ಥೆಗಳ ಎಲ್ಲಾ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿನ ಗಣಕೀಕೃತ ಕೆಲಸದ ವಾತಾವರಣವನ್ನು ಪರಿಚಯಿಸುವ ಉಪಕ್ರಮವನ್ನು ಇವರು ಕೈಗೊಂಡಿದ್ದಾರೆ. ಪೂಜ್ಯಮಹಾಸ್ವಾಮೀಜಿಯವರ ದೃಷ್ಟಿಯು ಅವರ ಗುರುಗಳ ಹಾದಿಯನ್ನು ಅನುಸರಿಸುವುದು, ತಮ್ಮ ಗುರುಗಳ ಹಾದಿಯಲ್ಲಿ ಉತ್ಸಹಾದಿಂದ ಉಳಿಸಿ, ಉತ್ತೇಜಿಸಿ ಮುಂದುವರಿಸಲು ಮತ್ತು ಪ್ರಗತಿಗೆ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಮಹಾಸ್ವಾಮೀಜಿಯವರಿಗೆ 2016ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟನ್ನು ನೀಡಿ ಗೌರವಿಸಲಾಯಿತು. ಪೂಜ್ಯಮಹಾಸ್ವಾಮೀಜಿಯವರಿಗೆ ಜ್ಞಾನದಸಾಹಿತ್ಯ ಕೃತಿಗಳು ಮತ್ತು ಬರಹಗಳೆಂದರೆ ಬಹಳ ಒಲವು ಶ್ರೀ ಆದಿಚುಂಚನಗಿರಿಮಠದ ವಿವಿಧ ಅಭಿವೃದ್ಧಿ ಕಾರ್ಯಕ್ರಮ ಹಾಗೂ ವಿಸ್ತರಣೆಗಾಗಿ ದೇಶ ವಿದೇಶಗಳಿಗೆ ಭೇಟಿ ನೀಡುತ್ತಾ ಬಂದಿದ್ದಾರೆ ಪರಮಪೂಜ್ಯ, ಭೈರವೈಕ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಗಳ ಅಣತಿಯಂತೆ 14 ಜನವರಿ 2013ರಂದು ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ನೂತನ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಲಾಯಿತು ಅನ್ನದಾಸೋಹ ಅಕ್ಷರ ದಾಸೋಹ ಮೊದಲಾದ ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಗಳು ಅಂದಿನಿಂದ ಶ್ರೀ ಮಠರ ಜವಾಬ್ದಾರಿಯನ್ನು ಹೊತ್ತು ನಿರಂತರವಾಗಿ ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ.



॥ ಜೈ ಶ್ರೀ ಗುರುದೇವ್ ॥

# ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

**Sri Adichunchanagiri Mahasamsthana Math**

ಶ್ರೀ ಆದಿಚುಂಚನಗಿರಿ ಕ್ಷೇತ್ರ, –571811, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

Sri Adichunchanagiri kshetra-571811, Nagamangala tq, Mandya Dist,.

Branch: Sri Adichunchanagiri Mahasamsthana Math, Vijayanagara Branch, Bengaluru-560040.
Ph: 080-23300923, 23103729.



ದಿನಾಂಕ 25.11.2021

## ಶುಭ ಸಂದೇಶ

ಚಿಕ್ಕಬಳ್ಳಾಪುರದಲ್ಲಿರುವ ನಮ್ಮ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟಿನ ಅಡಿಯಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಜಗದ್ಗುರು ಶ್ರೀ ಚಂದ್ರಶೇಖರನಾಥ ಸ್ವಾಮೀಜಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯೋತ್ಸವ ಮತ್ತು ರಾಷ್ಟ್ರಕವಿ ಕುವೆಂಪುರವರ ಜನ್ಮ ದಿನೋತ್ಸವವನ್ನು ಆಚರಿಸುತ್ತಿರುವ ಶುಭ ಸಂದರ್ಭದಲ್ಲಿ 'ಚಿರ ವಿನೂತನ' ಎಂಬ ವಿಶೇಷ ಸಂಚಿಕೆಯೊಂದನ್ನು ಪ್ರಕಾಶಿಸುತ್ತಿರುವ ವಿಷಯ ತಿಳಿದು ನಮಗೆ ಬಹಳ ಸಂತೋಷವಾಯಿತು.

ಕರ್ನಾಟಕ ಎಂಬ ಹೆಸರು ಇಂದು ನೆನ್ನೆಯದಲ್ಲ. ಶತ ಶತಮಾನಗಳಿಂದಲೂ ತನ್ನ ಹೆಸರಿನ ಸಾರ್ಥಕ್ಯ ಹಾಗೂ ಪರಂಪರೆಯನ್ನು ಕಾಯ್ದುಕೊಂಡು ಬಂದಿರುವ ಹೆಮ್ಮೆಯ ನಾಡು. ವಿಶ್ವಕವಿ ಕುವೆಂಪು ಅವರು ವಿಶ್ವಮಾನವ ತತ್ವದ ಪ್ರತಿಪಾದಕರು, ಪ್ರಕೃತಿಯ ಆರಾಧಕರು. ಇವರು ಜಗದ ಕವಿಯೂ ಹೌದು, ಯುಗದ ಕವಿಯೂ ಹೌದು. ಕುವೆಂಪುರವರ ವ್ಯಕ್ತಿತ್ವ, ಕನ್ನಡ ಭಾಷೆ ಮತ್ತು ಕರ್ನಾಟಕದ ಬಗೆಗಿನ ಉತ್ಕಟವಾದ ಅಭಿಮಾನ ಮತ್ತು ಬದ್ಧತೆಗೆ ಹಿಡಿದ ಕನ್ನಡಿ. ಕನ್ನಡವನ್ನು ಕುರಿತು– ಕನ್ನಡ ಎನೆ ಕುಣಿದಾಡುವುದೆನ್ನೆದೆ, ಕನ್ನಡ ಎನೆ ಕಿವಿ ನಿಮಿರುವುದು ಎಂದು ಬರೆದ ಪುಟ್ಟಪ್ಪರವರು ವಿವಿಧ ಭಾಗಗಳಲ್ಲಿ ಹಂಚಿಹೋಗಿರುವ ಕನ್ನಡ ನಾಡಿನ ಎಲ್ಲಾ ಭಾಗಗಳು ಒಗ್ಗೂಡಬೇಕು ಎಂಬ ಕನಸನ್ನೂ ಕಂಡರು. ಅವರ ಕನಸು ನನಸಾಯ್ತು. ನಾಡಿನ ಎಲ್ಲಾ ಭಾಗಗಳೂ ಒಗ್ಗೂಡಿ ಕರ್ನಾಟಕದ ಏಕೀಕರಣವಾಯ್ತು. ಏಕೀಕೃತ ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣವೂ ಆಯ್ತು. ಆದರೆ ಕುವೆಂಪು ತೃಪ್ತರಾಗಲಿಲ್ಲ. ಕನ್ನಡ ನಾಡಿಗೆ ಕರ್ನಾಟಕ ಎಂದು ಹೆಸರಿಟ್ಟರಷ್ಟೇ ಸಾಲದು. ಶಿಕ್ಷಣದಲ್ಲಿ ಕನ್ನಡ ಮಾಧ್ಯಮವಾಗಬೇಕು. ಆಡಳಿತದಲ್ಲಿ ಕನ್ನಡ ಜಾರಿಯಾಗಬೇಕು. ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ಕೊಡಬೇಕು ಎಂಬುದು ಅವರ ಆಗ್ರಹವಾಗಿತ್ತು. ಕರ್ನಾಟಕ ಏಕೀಕರಣ ಹೋರಾಟದ ಜೊತೆಜೊತೆಗೆ ಸ್ವಾತಂತ್ರ್ಯ ಸಂಗ್ರಾಮವೂ ತುಂಬಾ ತೀವ್ರಗತಿಯಲ್ಲಿದ್ದ ಸಂದರ್ಭದಲ್ಲಿಯೇ ಕುವೆಂಪುರವರು ಭಾರತ ಜನನಿಯ ತನುಜಾತೆ ಗೀತೆಯನ್ನು ಬರೆದರು. ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ! ಕನ್ನಡ ಪ್ರೇಮ ಭಾರತ ಪ್ರೇಮಕ್ಕೆ ವಿರುದ್ಧವಲ್ಲ. ಒಂದರ ಹಿತ ಮತ್ತೊಂದರ ಹಿತದಲ್ಲಿದೆ. ಒಂದನ್ನು ಪ್ರೀತಿಸುವವರು ಮತ್ತೊಂದನ್ನು ಪ್ರೀತಿಸಬೇಕು ಎಂದರು. ಆ ನಿಟ್ಟಿನಲ್ಲಿ ಈ ಗೀತೆಯನ್ನು ಕರ್ನಾಟಕ ಸರ್ಕಾರವು ನಾಡಗೀತೆಯಾಗಿ ಘೋಷಿಸಿತು. ಕನ್ನಡಕ್ಕಾಗಿ ದುಡಿಯುತ್ತೇನೆ, ಕನ್ನಡಕ್ಕಾಗಿ ದುಡಿಯಲು ವ್ಯಕ್ತಿಗಳನ್ನು ಪ್ರಚೋದಿಸುತ್ತೇನೆ, ಅದಕ್ಕಾಗಿ ಭಗವಂತನಲ್ಲಿ ಮೊರೆಯಿಡುತ್ತೇನೆ. ನನ್ನೆಲ್ಲಾ ತಪಶಕ್ತಿಯನ್ನು ಅಥವಾ ಪ್ರಾರ್ಥನಾ ಶಕ್ತಿಯನ್ನು ಕನ್ನಡ ಸೇವೆಗಾಗಿ ಮೀಸಲಿಡುತ್ತೇನೆ ಎಂಬ ದೃಢ ಸಂಕಲ್ಪವನ್ನು ಹೊಂದಿದ್ದರು. ಆ ನಿಟ್ಟಿನಲ್ಲಿ ನಾಡು ನುಡಿಯ ವಿಷಯದಲ್ಲಿ ಇಂದು ಕನ್ನಡಿಗರೆಲ್ಲರಿಗೂ ರಾಷ್ಟ್ರಕವಿ ಕುವೆಂಪುರವರ ಬದುಕು ಆದರ್ಶವಾಗಬೇಕು. ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ಮುನ್ನಡೆದು ನಾಡು ನುಡಿಯ ಸೇವೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು.

ಪ್ರಸ್ತುತ ವಿದ್ಯಾಲಯದಲ್ಲಿ ಹಮ್ಮಿಕೊಂಡಿರುವ ಕರ್ನಾಟಕ ರಾಜ್ಯೋತ್ಸವ ಮತ್ತು ಕುವೆಂಪು ಜನ್ಮ ದಿನೋತ್ಸವದ ಶುಭ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಸಮಯೋಚಿತವಾಗಿದೆ. ಪ್ರಕಾಶಿಸುತ್ತಿರುವ 'ಚಿರ ವಿನೂತನ' ವಿಶೇಷ ಸಂಚಿಕೆಯು ನಾಡು, ನುಡಿಯ ಬಗ್ಗೆ ಮತ್ತು ಕುವೆಂಪುರವರ ಸಾರ್ಥಕ ಜೀವನ, ಸಾಧನೆ, ಸಾಹಿತ್ಯ ಹಾಗೂ ಅವರ ಆದರ್ಶ ಬದುಕಿನ ಬಗೆಗಿನ ಅತ್ಯುತ್ತಮ ಲೇಖನಗಳಿಂದ ಕೂಡಿ ಸರ್ವಾಂಗ ಸುಂದರವಾಗಿ ಮೂಡಿ ಬರಲೆಂದು, ಹಮ್ಮಿಕೊಂಡಿರುವ ಸಮಾರಂಭವು ಯಶಸ್ವಿಯಾಗಿ ನೆರವೇರಲೆಂದು ತುಂಬು ಹೃದಯದಿಂದ ಹಾರೈಸುತ್ತೇವೆ.

ಇಂತು ಭಗವತ್ಸೇವೆಯಲ್ಲಿ

(ಡಾ॥ ಶ್ರೀ ನಿರ್ಮಲಾನಂದನಾಥಸ್ವಾಮೀಜಿ)
ಪೀಠಾಧ್ಯಕ್ಷರು
ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ



## ಪೂಜ್ಯ ಶ್ರೀ ಶ್ರೀ ಮಂಗಳನಾಥ ಸ್ವಾಮೀಜಿಯವರು

ಪೂಜ್ಯ ಶ್ರೀ ಶ್ರೀ ಮಂಗಳನಾಥ ಸ್ವಾಮೀಜಿಯವರು 2005ರಲ್ಲಿ ಸನ್ಯಾಸತ್ವವನ್ನು ಸ್ವೀಕರಿಸಿದ್ದಾರೆ, ಮತ್ತು ಭೈರವೈಕ್ಯ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದಿದ್ದಾರೆ. ಶ್ರೀ ಆದಿಚುಂಚನಗಿರಿ ಮಠಕ್ಕೆ 14 ವರ್ಷಕ್ಕೂ ಹೆಚ್ಚು ಕಾಲ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಪೂಜ್ಯ ಸ್ವಾಮೀಜಿಯವರು ವೇದ ಮತ್ತು ಆಗಮಗಳಲ್ಲದೆ ಸಂಸ್ಕೃತದಲ್ಲಿ ಅದ್ವೈತ. ವೇದಾಂತದಂತಹ ವಿಷಯಗಳನ್ನು ಅಧ್ಯಯನ ಮಾಡಿದ್ದಾರೆ, ಮತ್ತು ಈ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಇವರು ಶಿಕ್ಷಣ, ಸಮಾಜ ಸೇವೆ ಮತ್ತು ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳನ್ನು ಮೈಗೂಡಿಸುವ ಕ್ಷೇತ್ರದಲ್ಲಿ ಮನುಕುಲದ ಉನ್ನತಿಗಾಗಿ ಶ್ರಮಿಸುತ್ತಿದ್ದಾರೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸುಮಾರು 20 ಕಿಲೋಮಿಟರ್ ದೂರದಲ್ಲಿರುವ ಚಿಕ್ಕಬಳ್ಳಾಪುರದಲ್ಲಿರುವ ಶಾಖ ಮಠದ ಜವಾಬ್ದಾರಿಯನ್ನು 2010ರಲ್ಲಿ ಶ್ರೀ ಶ್ರೀ ಮಂಗಳವಾರ ಸ್ವಾಮೀಜಿಯವರಿಗೆ ನೀಡಲಾಯಿತು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು ಬಿಜಿಎಸ್ ಶಿಕ್ಷಣ ಸಂಸ್ಥೆಗಳ ಚಿಕ್ಕಬಳ್ಳಾಪುರ ಶಾಖೆಯ ಕಾರ್ಯದರ್ಶಿಗಳಾಗಿ ನೇಮಿಸಿದರು.

ಇವರ ಉಸ್ತುವಾರಿಯಲ್ಲಿ ಶ್ರೀ ಆದಿಚುಂಚನಗಿರಿ ಶಾಖ ಮಠವು ಚಿಕ್ಕಬಳ್ಳಾಪುರ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ತನ್ನ ಸಾಮಾಜಿಕ ಸೇವಾ ಚಟುವಟಿಕೆಗಳನ್ನು ಬಲಪಡಿಸಿತು. ಅವರ ಸಂಸ್ಕೃತ, ಕನ್ನಡ ಮತ್ತು ಇತರ ಭಾಷೆಗಳ ಜ್ಞಾನವು ಅವರನ್ನು ದೊಡ್ಡ ವಿದ್ವಾಂಸರನ್ನಾಗಿ ಮಾಡಿದೆ ಪರಮ ಪೂಜ್ಯರ ಸಂಕಲ್ಪದಂತೆ ಚಿಕ್ಕಬಳ್ಳಾಪುರ– ಕೋಲಾರ ಜಿಲ್ಲೆ (ಶಿಡ್ಲಘಟ್ಟ, ಚಿಂತಾಮಣಿ, ಮಾಲೂರು, ಗೌರಿಬಿದನೂರು, ಮಂಚೇನಹಳ್ಳಿ) ಶಾಲಾ, ಕಾಲೇಜುಗಳಿಗೆ ಭೇಟಿ ನೀಡುತ್ತಾ ವಿದ್ಯಾರ್ಥಿಗಲ್ಲಿ ಮತ್ತು ಜನಸಾಮಾನ್ಯರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾ ಜನಮನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದ್ದಾರೆ.

ಗ್ರಾಮೀಣ ಭಾಗದ ಸಮಸ್ಯೆಯನ್ನು ಎದುರಿಸುತ್ತಿರುವ ಹಲವಾರು ರೈತ ಜೀವಿಗಳು ಸಮಸ್ಯೆಯನ್ನು, ಅಳಲನ್ನು ತೋಡಿಕೊಂಡಾಗ ಪರಿಹಾರದ ಮಾರ್ಗವನ್ನು ಕಂಡುಕೊಳ್ಳಬೇಕೆಂದು ಕರೆ ನೀಡಿ ರೈತರಲ್ಲಿ ಆತ್ಮ ಧೈರ್ಯವನ್ನು ತುಂಬುವ ಕಾರ್ಯಕ್ಕೆ ಸದಾ ಮುಂದಾಗಿದ್ದಾರೆ. ಒಟ್ಟಾರೆ ಶ್ರೀ ಕ್ಷೇತ್ರ ಆದಿಚುಂಚನಗಿರಿ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ ಬಾಲಗಂಗಾಧರನಾದ ಮಹಾಸ್ವಾಮೀಜಿ ಹಾಗೂ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ದಿವ್ಯಾಶೀರ್ವಾದದಿಂದ ತಂಪಾದ ಮತ್ತು ಸ್ಥಿರವಾದ ಚಿಂತನೆಯು ಚಿಕ್ಕಬಳ್ಳಾಪುರದ ಜನರಿಗೆ ಶಿಕ್ಷಣ, ಆರೋಗ್ಯ ಮತ್ತು ನೈತಿಕ ಮೌಲ್ಯಗಳಲ್ಲಿ ಮಾರ್ಗದರ್ಶನ ನೀಡಿದೆ ಎಂದು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

# ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ

## ಚಿಕ್ಕಬಳ್ಳಾಪುರ

ಎಸ್ ಜೆ ಸಿ ತಾಂತ್ರಿಕ ಮಹಾ ವಿದ್ಯಾಲಯವು 1986 ರಿಂದ ಕರ್ನಾಟಕದಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಹೆಸರಾಂತ ತಾಂತ್ರಿಕ ಸಂಸ್ಥೆಗಳಲ್ಲಿ ಇದು ಒಂದಾಗಿದೆ. ಮೂರೂವರೆ, ದಶಕಗಳಲ್ಲಿ, ಈ ಪ್ರತಿಷ್ಠಿತ ಸಂಸ್ಥೆಯ ವಿಕಸನವು ಅತ್ಯಾಧುನಿಕ ಸೌಲಭ್ಯಗಳ ಕಲ್ಪನೆಗೆ ಮತ್ತು ನಾವೀನ್ಯತೆಗೆ ಒತ್ತು ನೀಡುವ ಮೂಲಕ ಶಿಕ್ಷಣಕ್ಕಾಗಿ ಮಾನವ ಸಂಪನ್ಮೂಲಗಳನ್ನು ಮೀಸಲಟ್ಟಿದೆ ಜಾಗತಿಗೆ ಸವಾಲುಗಳನ್ನು ಎದುರಿಸಲು ವ್ಯಾಪಕ ಶ್ರೇಣಿಯ ವಿಶ್ಲೇಷಣಾತ್ಮಕ ಕಾರ್ಯತಂತ್ರ ಮತ್ತು ನಾಯಕತ್ವದ ಸಾಮರ್ಥ್ಯಗಳೊಂದಿಗೆ ಹೆಚ್ಚು ನುರಿತ ತಾಂತ್ರಿಕ ಮತ್ತು ನಿರ್ವಹಣಾ ವೃತ್ತಿಪರರನ್ನು ರೂಪಿಸುವುದು ನಮ್ಮ ಗುರಿಯಾಗಿದೆ. ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಜೊತೆಗೆ ತಾಂತ್ರಿಕ ಮತ್ತು ನಿರ್ವಹಣ ಕೌಶಲ್ಯಗಳೆರಡನ್ನು ಹೊಂದಿರುವ ವಿಶ್ವದರ್ಜೆಯ ವೃತ್ತಿಪರರಾಗಿ ನಮ್ಮ ವಿದ್ಯಾರ್ಥಿಗಳನ್ನು ಸಜ್ಜುಗೊಳಸಲು ನಾವು ಪ್ರಯತ್ನಿಸುತ್ತೇವೆ. ಇದರಿಂದ ವಿದ್ಯಾರ್ಥಿಗಳ ಜೀವನ ಮತ್ತು ಸಮಾಜಕ್ಕೆ ಕೊಡುಗೆಯಾಗುತ್ತದೆ.

ಸಂಸ್ಥೆಯು ಕಳೆದ ವರ್ಷಗಳಲ್ಲಿ ವಿಶ್ವವಿದ್ಯಾನಿಲಯದ ಶ್ರೇಣಿಗಳ ಮತ್ತು ನಿಯೋಜನೆಗಳೊಂದಿಗೆ, ಫಲಿತಾಂಶಗಳಲ್ಲಿ ಅತ್ಯುತ್ತಮ ದಾಖಲೆಯನ್ನು ಹೊಂದಿದೆ. ಶೈಕ್ಷ ಣಿಕ ಜೊತೆಗೆ ವಿದ್ಯಾರ್ಥಿಗಳು ಸಾಂಸ್ಕೃತಿಕ, ಕ್ರೀಡೆ ಮತ್ತು ಸಾಮಾಜಿಕ ಕಾರ್ಯಗಳ ಮೂಲಕ ಪಠ್ಯೇತರ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ಮತ್ತು ಉತ್ಕೃಷ್ಟರಾಗಿದ್ದಾರೆ. ಎನ್ ಬಿ ಎ – ಮಾನ್ಯತೆ ಮತ್ತು ನ್ಯಾಕ್ ಮಾನ್ಯತೆ, ಫಲಿತಾಂಶ ಆಧಾರಿತ ಸಂಶೋಧನಾ ಕಲಿಕಾ ಪ್ರಕ್ರಿಯೆ, ಶೈಕ್ಷಣಿಕ ಶಿಸ್ತು, ಪ್ರಯೋಗಾಲಯ ಕಾರ್ಯಾಗಾರದಲ್ಲಿ ನವೀನ ಅಭ್ಯಾಸಗಳು ಯೋಜನೆ ಆಧಾರಿತ ಕಲಿಕೆ, ಸಂಶೋಧನೆ ಮತ್ತು ಮತ್ತು ಇಂಟರ್ನ್‌ಶಿಪ್ ಅವಕಾಶಗಳು ವಿವಿಧ ಕೌಶಲ್ಯ ಸಂದರ್ಶನಗಳನ್ನು ಎದುರಿಸಲು ತರಬೇತಿ, ವ್ಯಕ್ತಿತ್ವ ವಿಕಸವ ಕಾರ್ಯಕ್ರಮಗಳು ಮತ್ತು ವಿವಿಧ ತಾಂತ್ರಿಕ ಉತ್ಸವಗಳು ವಿಚಾರಗೋಷ್ಠಿಗಳು, ಸಮ್ಮೇಳನಗಳು, ಜೀವನ ಕೌಶಲ್ಯಕ್ಕಾಗಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿಕೆಯಿಂದಾಗಿ ಈ ವರ್ಷಗಳಲ್ಲಿ ಸಮರ್ಪಕ ಆಡಳಿತ, ಅಧ್ಯಾಪಕರು. ಸಿಬ್ಬಂದಿ ಮತ್ತು ಪ್ರಾಮಾಣಿಕ ವಿದ್ಯಾರ್ಥಿಗಳ ಪ್ರಯತ್ನಗಳಿಂದ ಈ ವೈಭವವನ್ನು ಸಾಧಿಸಲಾಗಿದೆ. ತರಗತಿಯ ಬೋದನೆ ಪ್ರಯೋಗಾಲಯ ಸೂಚನೆಗಳು, ಕೈಗಾರಿಕ ತರಬೇತಿಗಳು ಮತ್ತು ಕ್ರೀಡೆ, ಸಾಂಸ್ಕೃತಿಕ ಮತ್ತು ಇತರ ಆಸಕ್ತಿಯ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಈ ಮೂಲಕ ವಿದ್ಯಾಲಯದ ಮೂಲಕ ಒದಗಿಸಿದ ಅನನ್ಯ ಅವಕಾಶಗಳನ್ನು ಪಡೆಯುವಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಅತ್ಯುತ್ತಮ ವೃತ್ತಿಪರ ವೃತ್ತಿಜೀವನವನ್ನು ಹೊಂದಿರುತ್ತಾರೆ ಎಂದು ಸಂಸ್ಥೆಯು ಖಚಿತಪಡಿಸುತ್ತದೆ

ಕಾಲೇಜಿನಲ್ಲಿ ನಿಮಗೆ ತುಂಬಾ ಸಂತೋಷ ಮತ್ತು ತೃಪ್ತಿಕರ ವಿದ್ಯಾರ್ಥಿ ಜೀವನವನ್ನು ನಾವು ಬಯಸುತ್ತೇವೆ ಮತ್ತು ನಿರೀಕ್ಷಿತ ವೃತ್ತಿಜೀವನದ ಉತ್ತುಂಗವನ್ನು ತಲುಪುವ ಸಾಮಾಜಿಕ ಜವಾಬ್ದಾರಿಯತ ವ್ಯಕ್ತಿಗಳನ್ನು ಮಾಡಲು ಪ್ರೀತಿ ಮತ್ತು ಕಾಳಜಿಯಾ ವಾತಾವರಣವನ್ನು ಖಾತರಿಪರಿಸುತ್ತೇವೆ.

# ಚಿರವಿನೂತನ ಕನ್ನಡ ಸಂಘ

ಅಂಚೆ ಪೆಟ್ಟಿಗೆ ಸಂಖ್ಯೆ 20, ಬಿ ಬಿ ರಸ್ತೆ, ಚಿಕ್ಕಬಳ್ಳಾಪುರ

## ಕಾರ್ಯಕಾರಿ ಸಮಿತಿ

| | |
|---|---|
| ಡಾ|| ಜಿ ಟಿ ರಾಜು | : ಪ್ರಾಂಶುಪಾಲರು |
| ಶ್ರೀ ಸುರೇಶ. ಜೆ | : ಕುಲಸಚಿವರು |
| ಶ್ರೀ ಲೋಹಿತ್ ಜಿ ಎನ್ | : ಗ್ರಂಥಪಾಲಕರು |
| ಡಾ|| ನಾಗೇಂದ್ರ ಕುಮಾರ್ ಎಂ | : ಪ್ರಾಧ್ಯಾಪಕರು |
| ಶ್ರೀ ಚೌಡಪ್ಪ ಎಂ ಆರ್ | : ಸಹಾಯಕ ಪ್ರಾಧ್ಯಾಪಕರು |

## ಸದಸ್ಯರು

| | |
|---|---|
| ಶ್ರೀ ಡಾ.ಭಾಸ್ಕರ್ ಎಸ್ | : ವಿದ್ಯುನ್ಮಾನ ವಿಭಾಗ |
| ಡಾ. ಮಂಜುನಾಥ್ ಕೆ ಎಸ್ | : ಯಾಂತ್ರಿಕ ವಿಭಾಗ |
| ಶ್ರೀ ಆನಂದ್ ತಿಲಗಲ್ | : ಮಾಹಿತಿ ತಂತ್ರಜ್ಞಾನ ವಿಭಾಗ |
| ಡಾ. ರವಿ ಕುಮಾರ್ ಎಂ | : ವೈಮಾನಿಕ ವಿಭಾಗ |
| ಡಾ. ಸುರೇಶಗೌಡ ಎಂ ವಿ | : ಅಂತರಿಕ್ಷಯಾನ ವಿಭಾಗ |
| ಶ್ರೀಮತಿ ರಶ್ಮಿ ಕೆ ಎಸ್ | : ಗಣಕ ಯಂತ್ರ ವಿಭಾಗ |
| ಶ್ರೀಮತಿ ಡಾ. ಪುಷ್ಪ | : ಭೌತ ಶಾಸ್ತ್ರ |
| ಡಾ. ಚಂದ್ರಶೇಖರ್ ಕೆ ಎಸ್ | : ರಸಾಯನ ಶಾಸ್ತ್ರ |
| ಶ್ರೀಮತಿ ವೀಣಾ ಎನ್ | : ಗಣಿತ ವಿಭಾಗ |
| ಶ್ರೀಮತಿ ಶ್ರುತಿ ಜಿ | : ಎಂ ಬಿ ಎ ವಿಭಾಗ |
| ಶ್ರೀಮತಿ ಚಂದ್ರಕಲಾ ಎಸ್ | : ಕಾಮಗಾರಿ ವಿಭಾಗ |
| ಶ್ರೀ ಶಶಿಕುಮಾರ್ ಎನ್ ವಿ | : ಮಾನವ ಸಂಪನ್ಮೂಲ ವಿಭಾಗ |
| ಶ್ರೀ ಚಂದನ್ ಟಿ | : ಕ್ರೀಡಾ ವಿಭಾಗ |




**ಡಾ. ಜಿ.ಟಿ.ರಾಜು**
ಪ್ರಾಂಶುಪಾಲರು

## ಪ್ರಾಂಶುಪಾಲರ ನುಡಿ

### ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ

ಶತ ಶತಮಾನಗಳ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕನ್ನಡ ನಾಡು-ನುಡಿ, ಇತಿಹಾಸದ ಯಾವ ಕಾಲಘಟ್ಟದಲ್ಲಿಯೂ ಒಂದೇ ಪ್ರಭುತ್ವಕ್ಕೆ ಒಳಪಟ್ಟಿರಲಿಲ್ಲ. ರಾಷ್ಟ್ರಕೂಟರ ನೃಪತುಂಗನ ಕಾಲಕ್ಕೆ ದಕ್ಷಿಣದಲ್ಲಿ ಕಾವೇರಿ ನದಿಯಿಂದ ಉತ್ತರದ ಗೋದಾವರಿ ನದಿಯವರೆಗೆ ಕನ್ನಡ ನಾಡು ವ್ಯಾಪಿಸಿತ್ತು ಎಂಬುದಕ್ಕೆ ಆಧಾರಗಳಿವೆ. ನಂತರ ಕನ್ನಡ ನಾಡು 22 ಪ್ರಭುತ್ವಗಳಲ್ಲಿ ಹಂಚಿ ಹೋಗಿತ್ತು.

ನಾಡ ಪ್ರೇಮಿಗಳು, ಮಹನೀಯರ, ಕವಿಗಳ, ಸಾಹಿತಿಗಳ ಮತ್ತು ಸಂಘ-ಸಂಸ್ಥೆಗಳ ಹೋರಾಟದ ಪ್ರತಿಫಲವಾಗಿ ಹರಿದು-ಹಂಚಿ ಹೋಗಿದ್ದ ಕನ್ನಡ ನಾಡು ಏಕೀಕರಣ ಸಾಧಿಸಿ, ಭಾಷಾ ಮರು ಪ್ರಾಂತವಾಗಿ 1956ರ ನವೆಂಬರ್ 1ರಂದು ಮೈಸೂರು ರಾಜ್ಯವಾಗಿ ಉದಯವಾಯಿತು. ಅನಂತರ ಇನ್ನಡಿಗರ ಮನದಾಳದ ಅಪೇಕ್ಷೆಯಂತೆ 1973ರ ನವೆಂಬರ್ 1 ರಂದೇ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ಅಂದಿನಿಂದ ರಾಜ್ಯೋತ್ಸವವನ್ನು ನಾಡಿನ ಜನತೆ ಸಂಭ್ರಮದಿಂದ ಆದರಿಸುತ್ತಿದ್ದಾರೆ.

ಮೈಸೂರು ರಾಜ್ಯವು ಕರ್ನಾಟಕ ಎಂದು ಮರು ನಾಮಕರಣಗೊಂಡು ನವೆಂಬರ್ 1, 2023ಕ್ಕೆ 50 ವರ್ಷ ಪೂರ್ಣಗೊಳ್ಳಲಿದೆ. ಈ ಶುಭ ಸಂದರ್ಭದಲ್ಲಿ ಐದು ಕನ್ನಡ ಗೀತೆಗಳನ್ನು ಕಡ್ಡಾಯವಾಗಿ ಹಾಡುವ ಮೂಲಕ ನುಡಿ ನಮನ ಸಲ್ಲಿಸುವಂತೆ ರಾಜ್ಯ ಸರ್ಕಾರ ಆದೇಶಿಸಿದೆ. ಹಾಗೆಯೇ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಎಂಬ ಹೆಸರಿನಲ್ಲಿ ಇಡೀ ವರ್ಷ ಕರ್ನಾಟಕ ಇತಿಹಾಸ, ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ನಾಡು-ನುಡಿಗೆ ಸಂಬಂಧಿಸಿದಂತೆ ಯುವ ಜನತೆಯಲ್ಲಿ ಕನ್ನಡ-ಕನ್ನಡಿಗ- ಕರ್ನಾಟಕ ಅರಿವು ಮೂಡಿಸುವ ಯೋಜನೆ ಹಮ್ಮಿಕೊಳ್ಳುವಂತೆ ಸರ್ಕಾರ ಸೂಚಿಸಿದೆ.

ಈ ಸಂದರ್ಭದಲ್ಲಿ ಕನ್ನಡಿಗರು ಮತ್ತು ಕನ್ನಡ ಭಾಷೆ ಎದುರಿಸುತ್ತಿರುವ ಸಮಸ್ಯೆಗಳನ್ನು ಚಿಂತಿಸುವ ಮತ್ತು ಪರಿಹಾರ ಕಂಡುಕೊಳ್ಳುವ ಅನಿವಾರ್ಯತೆ ಇದೆ. ಅಂತೆಯೇ ಶಾಲಾ-ಕಾಲೇಜುಗಳಲ್ಲಿ ಸಾಳನ ನಾಡಿನ ಕಣ್ಮಣಿಗಳಾದ ಯುವ ಜನಾಂಗಕ್ಕೆ ಐತಿಹಾಸಿಕ ಹಿನ್ನೆಲೆಯನ್ನು ತಿಳಿಸುವ, ಅವರಲ್ಲಿ ಮಾತೃಭಾಷೆಯ ಬಗ್ಗೆ ಅಭಿಮಾನ ಮೂಡಿಸಿ, ಕನ್ನಡ ನಾಡು-ನುಡಿ, ಸಾಹಿತ್ಯ-ಸಂಸ್ಕೃತಿಯನ್ನು ಸಂರಕ್ಷಣೆ ಮಾಡಿ ಸಂವರ್ಧನೆಗೊಳಿಸುವ ಜವಾಬ್ದಾರಿಯ ಅರಿವನ್ನು ಮೂಡಿಸುವ ಅವಶ್ಯಕತೆ ಇದೆ ಎನ್ನುವ ಬಾವನನ್ನದು.



**ಶ್ರೀ ಲೋಹಿತ್ ಜಿ ಎನ್**
ಗ್ರಂಥಪಾಲಕರು
ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ

## ಸಂಪಾದಕರ ನುಡಿ

ಭೈರವೈಕ್ಯ ಪರಮಪೂಜ್ಯ ಜಗದ್ಗುರು ಪದ್ಮಭೂಷಣ ಶ್ರೀ ಶ್ರೀ ಶ್ರೀ ಡಾ.ಬಾಲಗಂಗಾಧರ ಮಹಾಸ್ವಾಮೀಜಿಯವರ ದಿವ್ಯಚೇತನಕ್ಕೆ ನೆನೆಸುತ್ತಾ ಹಾಗೂ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಕೃಪಾಶೀರ್ವಾದದೊಂದಿಗೆ, ಪೂಜ್ಯಶ್ರೀ ಶ್ರೀ ಮಂಗಳನಾಥಸ್ವಾಮೀಜಿಯವರ ಮಾರ್ಗದರ್ಶನದಂತೆ ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲದ ಪ್ರಾಂಶುಪಾಲರಾದ ಡಾ.ಜಿ.ಟಿ ರಾಜುರವರ ಮಹದಾಸೆಯಂತೆ 2021 ರಲ್ಲಿ ಚಿರವಿನೂತನ ಕನ್ನಡ ಸಂಘವನ್ನು ಸ್ಥಾಪಿಸಲಾಯಿತು. ಮೂರನೇ ವರ್ಷ 2023ರಲ್ಲಿಯೂ ಸಹ ವಿಜೃಂಭಣೆಯಿಂದ ಕನ್ನಡ ರಾಜ್ಯೋತ್ಸವ ಹಾಗೂ ರಾಷ್ಟ್ರ ಕವಿ ಡಾ. ಕುವೆಂಪುರವರ ಜನ್ಮದಿನಾಚರಣೆಯನ್ನು ಆಚರಿಸಿ ಕನ್ನಡ–ನಾಡು ನುಡಿ, ಭಾಷೆ, ನೃತ್ಯ ಸಾಹಿತ್ಯ, ಬರಹ ಕಲೆಗೆ ಸಂಬಂಧಿಸಿದಂತೆ ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಅಡಗಿರುವ ಹೀಗೆ ಪ್ರತಿಭೆಯನ್ನ ಪ್ರದರ್ಶಿಸಲು ಚಿರವಿನೂತನ ಸಂಘದ ಮೂಲಕ ಯುವ ಜನತೆಯಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಗಳು ಯಶಸ್ವಿಯಾಯಿತು.

"ಹೆಸರಾಯಿತು ಕರ್ನಾಟಕ. ಉಸಿರಾಗಲಿ ಕನ್ನಡ' ಎಂಬ ಧ್ಯೆಯವಾಕ್ಯದ ಅಡಿಯಲ್ಲಿ ಕರ್ನಾಟಕ ನಾಮಕರಣದ ಸುವರ್ಣ ವರ್ಷಾಚರಣೆಯನ್ನು ನಾವೆಲ್ಲ ಆಚರಿಸುತ್ತಿದ್ದೇವೆ. ಆದರೆ ಕರ್ನಾಟಕದ ಏಳಿಗೆಗೆ ಇನ್ನೂ ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗಿಲ್ಲ. ಒಂದಾಗಿರುವ ಕನ್ನಡದ ಮನಸ್ಸುಗಳೆಲ್ಲವೂ ಒಗ್ಗೂಡಿ ನಮ್ಮೊಳಗಿನ ಹಾಗೂ ಹೊರಗಿನ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳಬೇಕಾದ ತುರ್ತಿನ ಕಾಲ ಇದು, ಇದಕ್ಕಾಗಿ ಎಲ್ಲರೂ ಶ್ರಮಿಸಬೇಕು.

ಈ ವಾರ್ಷಿಕ ಸಂಚಿಕೆಯಲ್ಲಿ ಪ್ರಕಟಿತವಾಗಿರುವ ಲೇಖನ ವಿಚಾರಗಳು ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದ್ದು, ಜ್ಞಾನದ ನಾನಾ ಶಾಖೆಗಳಿಂದ ಅರಿತು ಅವುಗಳನ್ನು ಬದುಕಿನಲ್ಲಿ ರೂಢಿಸಿಕೊಳ್ಳುವುದರಿಂದ ಉತ್ತಮ ಸಂಸ್ಕಾರಯುತ ಬರವಣಿಗೆ ಅಧ್ಯಾಪಕ ಮತ್ತು ವಿದ್ಯಾರ್ಥಿಗಳಿಂದ ಮೂಡಿಬಂದಿವೆ. ಈ ಬಾರಿಯ ಚಿರವಿನೂತನ ವಾರ್ಷಿಕ ಸಂಚಿಕೆಯನ್ನು ಬಿಡುಗೊಡೆಗೊಳಿಸಲು ಉತ್ಸಾಹ ತುಂಬಿದ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರಾದ ಶ್ರೀ ಡಾ.ಜಿ.ಟಿ ರಾಜುರವರಿಗೂ, ಕುಲಸಚಿವರಾದ ಶ್ರೀ ಸುರೇಶ ಜೆ ರವರಿಗೂ, ಸಕಾಲಕ್ಕೆ ಎಲ್ಲ ದಾಖಲೆ ಹಾಗೂ ಲೇಖನ ನೀಡಿದ ಅಧ್ಯಾಪಕರಿಗೂ, ಸಹಕರಿಸಿದ ನೀಡಿದ ಎಲ್ಲಾ ವಿಭಾಗದ ಮುಖ್ಯಸ್ಥರಿಗೂ, ಬೋಧಕ–ಭೋದಕೇತರ ಸಿಬ್ಬಂದಿ ವರ್ಗದವರಿಗೂ, ಸಂಘದ ಸದಸ್ಯರಿಗೂ, ವಿದ್ಯಾರ್ಥಿಗಳಿಗೂ ಚಿರಋಣಿಯಾಗಿದ್ದೇನೆ.

**ಹೆಸರಾಯಿತು ಕರ್ನಾಟಕ.... ಉಸಿರಾಗಲಿ ಕನ್ನಡ....**



**ಶ್ರೀ ಸುರೇಶ ಜೆ**
ಕುಲಸಚಿವರು,
ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ

## ಕುಲಸಚಿವರ ಸಂದೇಶ

ಕನ್ನಡ ಬಾವುಟ: ಕರ್ನಾಟಕಕ್ಕೆ ತನ್ನದೇ ಆದ ಪ್ರತ್ಯೇಕ ಭಾವುಟವಿದೆ. ಕನ್ನಡಕ್ಕೊಂದು ಭಾವುಟ ಅವಶ್ಯಕತೆಯನ್ನು ಅರಿತ ಕನ್ನಡದ ಹೋರಾಟಗಾರರಾದ ಎಂ ರಾಮಮೂರ್ತಿಗಳು ಹಳದಿ ಹಾಗೂ ಕೆಂಪು ಬಣ್ಣ ಬಳಸಿ ಬಾವುಟವನ್ನು ಸಿದ್ದಪಡಿಸಿದರು. ಮೂಲತಃ ಹಳದಿ ಬಣ್ಣವು ಕನ್ನಡಾಂಬೇಯ ಆರಿಶಿನ ಮತ್ತು ಕುಂಕುಮವನ್ನು ಸೂಚಿಸುತ್ತದೆ ಹಾಗೂ ಹಳದಿ ಬಣ್ಣವು ಶಾಂತಿ, ಸೌಹಾರ್ದತೆ ಸೂಚಿಸಿದರೆ ಕೆಂಪು ಬಣ್ಣ ಕ್ರಾಂತಿಯ ಸಂದೇಶ ನೀಡುತ್ತದೆ. ಆರಂಭದಲ್ಲಿ ಕನ್ನಡ ಬಾವುಟ ಸಿದ್ಧಗೊಂಡಾಗ ಬಾವುಟದ ಮಧ್ಯೆ ಕರ್ನಾಟಕದ ಭೂಪಟ ಮತ್ತು ಅದರ ನಡುವಿನಲ್ಲಿ ಏಳು ಕವಲುಗಳುಳ್ಳ ತೆನೆಯ ಚಿತ್ರವಿತ್ತು. ಮುದ್ರಿಸಲು ಸ್ವಲ್ಪ ಕಷ್ಟವಾಗುತ್ತಿದ್ದರಿಂದ ಅದನ್ನು ತೆಗೆದು ಕೇವಲ ಹಳದಿ ಮತ್ತು ಕೆಂಪು ಬಣ್ಣವನ್ನು ಮಾತ್ರ ಉಳಿಸಿಕೊಳ್ಳಲಾಯಿತು

ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲದಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ರಾಷ್ಟ್ರಕವಿ ಕುವೆಂಪು ರವರ ಜನ್ಮದಿನಾಚರಣೆಯನ್ನು ಆಚರಿಸುವುದು ಹೆಮ್ಮೆಯ ಸಂಗತಿ. ನಮ್ಮ ನಿಮ್ಮೆಲ್ಲರ ಪಾತ್ರ ಹೆಚ್ಚು ಮಹತ್ವದ್ದಾಗಿದೆ. ನಾಡು, ನುಡಿ ಮತ್ತು ಇಲ್ಲಿನ ಸಂಪತ್ತನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗುವುದು ಕೂಡ ನಮ್ಮ ನಿಮ್ಮ ಜವಾಬ್ದಾರಿಯಾಗಿದೆ..

ಚಿರವಿನೂತನ ಸಂಚಿಕೆಯು ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಕಾಲೇಜಿನ ಪ್ರಯತ್ನಗಳಲ್ಲಿ ಪ್ರಮುಖವಾದುದು. ಈ ಮುಖೇನ ವಿದ್ಯಾರ್ಥಿಗಳ ಅಭಿರುಚಿ/ಅಭಿಪ್ರಾಯಗಳನ್ನು ಲೇಖನಗಳ ರೂಪದಲ್ಲಿ, ಕವನದ ಮೂಲಕ, ಹಾಗೂ ಚಿತ್ರ–ಕಲೆಯ ರೂಪದಲ್ಲಿ ಪ್ರಸ್ತುತ ಪಡಿಸಲು ಇರುವ ಒಂದು ಸದಾವಕಾರ ಕಾಲೇಜಿನ ವಿದ್ಯಾರ್ಥಿಗಳು ಈ ಆವಕಾಶವನ್ನು ಉಪಯುಕ್ತ ರೀತಿಯಲ್ಲಿ ಬಳಸಿಕೊಂಡಲ್ಲಿ ಆದ ಕಾಲೇಜಿನ ವಿದ್ಯಾರ್ಥಿಗಳ ಅರಿವಿನ/ಚಿಂತನೆಯ ಹರಿವು–ವಿಸ್ತಾರಗಳ ಮತ್ತು ವ್ಯಕ್ತಿ– ಅಭಿವೃದ್ಧಿಯ ದಿಸೆಯಲ್ಲಿನ ಅದರ ಸ್ಪಷ್ಟ–ನಿಲುವುಗಳ ಸಂಗ್ರಹವಾಗಿ ಪರಿಣಮಿಸುವುದರಲ್ಲಿ ಯಾವುದೇ ಅನುಮಾನಗಳಿಲ್ಲ.

ಆದರೆ, ಈಗಿನ ಬದಲಾದ ಶೈಕ್ಷಣಿಕ/ಸಾಮಾಜಿಕ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗಳನ್ನು ಅವಲೋಕಿಸಿದಾಗ, ಗ್ರಂಥಾಲಯ/ಕನ್ನಡ ವಿಭಾಗದ ಶ್ರೀ ಲೋಹಿತ್ ಜಿ ಎನ್ ರವರು ಸಂಪಾದಕೀಯ ಹಾಗೂ ಇತರೆ ಸದಸ್ಯರ ವಿಶೇಷ ಆಸಕ್ತಿ ಮತ್ತು ಪ್ರಯತ್ನದ ಫಲವಾಗಿ ಬಾರಿಯೂ ಚಿರವಿನೂತನ ಸಂಚಿಕೆಯು ಅರ್ಥಪೂರ್ಣವಾಗಿ ಮೂಡಿಬಂದಿದೆ. ಅಂತೆಯೇ ವಿದ್ಯಾರ್ಥಿಗಳು ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಲ್ಲಿ ಅವರನ್ನು ಪ್ರೋತ್ಸಾಹಿಸುವ ಹಾಗೂ ಮಾರ್ಗದರ್ಶನ ನೀಡುವ ಪ್ರಯತ್ನಗಳು ನಮ್ಮೆಲ್ಲರ ಕಡೆಯಿಂದ ಇನ್ನು ಹೆಚ್ಚಾಗಿ ನೆಡಯಬೇಕಾಗಿದೆ. ಎಲ್ಲ ಅಡೆ–ತಡೆಗಳ ಮಧ್ಯೆಯೂ ಸಂಚಿಕೆಯನ್ನು ಅಚ್ಚುಕಟ್ಟಾಗಿ ತರಲು ಶ್ರಮಿಸಿದ ಸರ್ವರಿಗೂ ನ್ನ ಧನ್ಯವಾದಗಳನ್ನು ಹಾಗೂ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಯಬಯಸುತ್ತೇನೆ.



# ರಾಷ್ಟ್ರಕವಿ ಕುವೆಂಪು

ಜಯ ಭಾರತ ಜನನಿಯ ತನುಜಾತೆ', 'ಎಲ್ಲಾದರು ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು', 'ಓ ನನ್ನ ಚೇತನ ಆಗುವ ನೀ ಅನಿಕೇತನ' ಹೀಗೆ ರಾಷ್ಟ್ರಕವಿ ಕುವೆಂಪು ಅವರ ಹಲವಾರು ಕವನಗಳು ಕನ್ನಡಿಗರ ಮನದಾಳದಲ್ಲಿ ಹಾಸುಹೊಕ್ಕಾಗಿದೆ. ರಾಷ್ಟ್ರಕವಿ ಕುವೆಂಪು ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿಯಲ್ಲಿ 1904 ಡಿಸೆಂಬರ್ 29 ರಂದು ಜನಿಸಿದರು. ತಮ್ಮ ಪ್ರಾಥಮಿಕ ಶಿಕ್ಷಣ ತೀರ್ಥಹಳ್ಳಿಯಲ್ಲಿ ಪೂರೈಸಿ ಪ್ರೌಢಶಾಲಾ ಶಿಕ್ಷಣದಿಂದ ಹಿಡಿದು ಎಂಎ ಪದವಿಯವರೆಗೂ ಮೈಸೂರಿನಲ್ಲಿ ಓದಿದರು. ಕುವೆಂಪು ಅವರು ಕನ್ನಡದ ಅಗ್ರಮಾನ್ಯ ಕಾದಂಬರಿಕಾರ ನಾಟಕಕಾರ, ವಿರ್ಮಕ ಮತ್ತು ಚಿಂತಕ, ಇಪ್ಪತ್ತನೆಯ ಶತಮಾನದಲ್ಲಿ ಕಂಡ ದೈತ್ಯ ಪ್ರತಿಭೆ.

ವರಕವಿ ಬೇಂದ್ರೆ ಯವರಿಂದ 'ಯುಗದ ಕವಿ ಜಗದ ಕವಿ' ಎನಿಸಿಕೊಂಡವರು.ವಿಶ್ವಮಾನವ ಸಂದೇಶ ನೀಡಿದವರು. ಕನ್ನಡದ ಎರಡನೆಯ ರಾಷ್ಟ್ರಕವಿ , ಜ್ಞಾನಪೀಠ ಪ್ರಶಸ್ತಿಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟವರು. ಕರ್ನಾಟಕ ಕೊಡಮಾಡುವ ಕರ್ನಾಟಕ ರತ್ನ, ಹಾಗೂ ಪಂಪ ಪ್ರಶಸ್ತಿಯನ್ನು ಮೊದಲ ಬಾರಿಗೆ ಪಡೆದವರು.ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದಿದ ಇವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ಉಪಕುಲಪತಿಯಾಗಿ ನಿವೃತ್ತರಾವರು.

ಕಥನ ಕವನಗಳು, ಕಲಾ ಸುಂದರಿ, ನವಿಲು, ಪಕ್ಷಿಕಾಶಿ, ಶ್ರೀರಾಮಾಯಣ ದರ್ಶನಂ ಮಹಾಕಾವ್ಯವೂ ಸೇರಿ 30ಕ್ಕೂ ಹೆಚ್ಚು ಕಾವ್ಯ ಕೃತಿಗಳು. ಜಲಗಾರ, ಯಮನಸೋಲು, ಬೊಮ್ಮನಹಳ್ಳಿ ಕಿಂದರಿ ಜೋಗಿ, ವಾಲ್ಮೀಕಿ ಭಾಗ್ಯ ಸ್ಮಶಾನ ಕುರುಕ್ಷೇತ್ರ, ಮಹಾರಾತ್ರಿ, ರಕ್ತಾಕ್ಷಿ, ಬಿರುಗಾಳಿ, ಬೆರಳ್‌ಗೆ ಕೊರಳ್, ಶೂದ್ರ ತಪಸ್ವಿ, ಇತರೆ ನಾಟಕಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಗಳು, ವಿಮರ್ಶೆ, ಕಾವ್ಯ ಮೀಮಾಂಸೆ–ಕಾವ್ಯ ,ಶಿಶುಸಾಹಿತ್ಯ ಹೀಗೆ ಸಾಹಿತ್ಯ ಲೋಕಕ್ಕೆ ನೀಡಿರುವ ಕೊಡುಗೆ ಅಪಾರ.

1937 ಎಪ್ರಿಲ್ 30 ರಂದು ಹೇಮಾವತಿಯವರನ್ನು ಕೈ ಹಿಡಿದರು..ಪೂರ್ಣಚಂದ್ರ ತೇಜಸ್ವಿ ಮತ್ತು ಕೋಕಿಲೋದಯ ಚೈತ್ರ ಎಂಬ ಪುತ್ರರು, ಇಂದುಕಲಾ ಮತ್ತು ತರಿಣಿ ಎಂಬ ಇಬ್ಬ ಪುತ್ರಿಯರಿದ್ದಾರೆ. ರಾಮಕೃಷ್ಣ ಪರಮಹಂಸರ ಜೀವನದಿಂದ ಪ್ರಭಾವಿತರಾದ ಕುವೆಂಪುರವರು ಸ್ವಾಮಿ ಶಿವಾನಂದರಿಂದ ದೀಕ್ಷೆ ಪಡೆದಿದ್ದಾರೆ.

ಕುವೆಂಪು ರಾಷ್ಟೀಯ ಪ್ರತಿಷ್ಠಾನ ಇವರು ಜನಿಸಿದ ಮನೆಯನ್ನು ಕವಿಮನೆ ಹೆಸರಿನ ಮ್ಯೂಸಿಯಂ ಮಾಡಿದ್ದಾರೆ.1987 ರಲ್ಲಿ ಶಿವಮೊಗ್ಗದಲ್ಲಿ ಕುವೆಂಪುರವ ಗೌರವಾರ್ಥವಾಗಿ ಕುವೆಂಪು ವಿಶ್ವವಿದ್ಯಾಲಯ ಸ್ಥಾಪಿಸಲಾಯಿತು. ಕುವೆಂಪು ಅವರು ನವೆಂಬರ್ 11, 1994ರಂದು ಮೈಸೂರಿನಲ್ಲಿ ನಿಧನರಾದರು. ತಮ್ಮ ಹುಟ್ಟೂರಾದ ಕುಪ್ಪಳಿಯಲ್ಲಿ ಅವರ ಅಂತ್ಯಸಂಸ್ಕಾರವನ್ನು ನೆರವೇರಿಸಲಾಯಿತು. ಕುಪ್ಪಳಿಯಲ್ಲಿರುವ ಅವರ ಸಮಾಧಿ ಒಂದು ಸ್ಮಾರಕವಾಗಿದೆ.



# ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ

ಭಾರತ ದೇಶದ ಪವಿತ್ರ ಭೂಮಿಯಲ್ಲಿ ಜನಿಸಿದ ಪುಣ್ಯ ಪುರುಷರಲ್ಲಿ ಕನ್ನಡ ನಾಡಿನ ಕೀರ್ತಿ ಪತಾಕೆಯನ್ನು ವಿಶ್ವದ ಮಟ್ಟದಲ್ಲಿ ಎತ್ತಿ ಹಿಡಿದ ಮಹಾನ್ ಮೇಧಾವಿ, ತಂತ್ರಜ್ಞ, ಅಮರ ವಾಸ್ತು ಶಿಲ್ಪಿ, ಭಾರತದ ಭಾಗ್ಯ ವಿಧಾತ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ ನವರ ಜನ್ಮ ದಿನ ಸೆಪ್ಟೆಂಬರ್ 15. 1860. ಮೈಸೂರು ಪ್ರಾಂತ್ಯ (ಈಗಿನ ಕರ್ನಾಟಕ ರಾಜ್ಯ) ಚಿಕ್ಕಬಳ್ಳಾಪುರದ ಮುದ್ದೇನ ಹಳ್ಳಿಯಲ್ಲಿ ಸಂಸ್ಕೃತ ಪಂಡಿತರು, ಆಯುರ್ವೇದಿಕ್ ಪಂಡಿತರೂ ಆಗಿದ್ದ ಶ್ರೀನಿವಾಸ ಶಾಸ್ತ್ರಿ ಮತ್ತು ಶ್ರೀಮತಿ ವೆಂಕಚಮ್ಮ ದಂಪತಿಗಳ ಮಗನಾಗಿ ಜನಿಸಿದರು. ಅಭಿವೃದ್ಧಿಯ ಹರಿಕಾರರಾಗಿ ದೇಶಾದ್ಯಂತ ಕೈಗಾರಿಕೆ, ಅಣೆಕಟ್ಟೆ, ಬ್ಯಾಂಕಿಂಗ್, ಶಿಕ್ಷಣ ಹೀಗೆ ನಾನಾ ಕ್ಷೇತ್ರಗಳಲ್ಲಿ ದೇಶವನ್ನು ಪ್ರಗತಿ ಪಥದತ್ತ ಮುನ್ನಡೆಸಿದವರು.

ಭಾರತವು ಇದುವರೆಗೆ ನಿರ್ಮಿಸಿದ ಅತ್ಯಂತ ಶ್ರೇಷ್ಠ ಇಂಜಿನಿಯರ್‌ಗಳಲ್ಲಿ ಒಬ್ಬರಾದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಎಂ. ವಿಶ್ವೇಶ್ವರಯ್ಯ ಎಂದು ಪ್ರಸಿದ್ಧರಾಗಿದ್ದರು, ಅವರು ಉನ್ನತ ತತ್ವಗಳು ಮತ್ತು ಶಿಸ್ತಿನ ವ್ಯಕ್ತಿಯಾಗಿದ್ದರು. ಆದರ್ಶಪ್ರಾಯ ವ್ಯಕ್ತಿಯಾಗಿದ್ದ ಅವರು ಸರಳ ಜೀವನ ಮತ್ತು ಉನ್ನತ ಚಿಂತನೆಯಲ್ಲಿ ನಂಬಿಕೆ ಇಟ್ಟಿದ್ದರು. ಅವರ ಪೂರ್ವಜರು ಆಂಧ್ರಪ್ರದೇಶದ ಮೋಕ್ಷಗುಂಡಂನಿಂದ ಇಲ್ಲಿ ನೆಲೆಸಿದ್ದರು. ಅವರ ತಂದೆ ಶ್ರೀನಿವಾಸ ಶಾಸ್ತ್ರಿ ಅವರು ಸಂಸ್ಕೃತ ವಿದ್ವಾಂಸರು ಮತ್ತು ಆಯುರ್ವೇದ ವೈದ್ಯರಾಗಿದ್ದರು. ಬಾಲಕ ವಿಶ್ವೇಶ್ವರಯ್ಯನವರು ಕೇವಲ 12 ವರ್ಷದವರಾಗಿದ್ದಾಗ ಅವರ ತಂದೆ ತೀರಿಕೊಂಡರು. ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಅವರ ಜನ್ಮಸ್ಥಳದಲ್ಲಿದ್ದ ಪ್ರಾಥಮಿಕ ಶಾಲೆಯಲ್ಲಿ ಪಡೆದರು.

ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಅವರ ಜನ್ಮಸ್ಥಳದಲ್ಲಿದ್ದ ಪ್ರಾಥಮಿಕ ಶಾಲೆಯಲ್ಲಿ ಪಡೆದರು. ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿದರು. ಹಣದ ಕೊರತೆಯಿಂದ ಇಲ್ಲಿಯೇ ಟ್ಯೂಷನ್ ಮಾಡಬೇಕಾಯಿತು. 1881ರಲ್ಲಿ ಬಿ.ಎ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಮೈಸೂರು ಸರ್ಕಾರದ ನೆರವಿನಿಂದ ಪೂನಾದ ಸೈನ್ಸ್ ಕಾಲೇಜಿಗೆ ಇಂಜಿನಿಯರಿಂಗ್ ಓದಲು ಸೇರಿದರು. 1883ರ ಎಲ್‌ಸಿಇ ಮತ್ತು ಎಫ್‌ಸಿಇ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಅವರು ತಮ್ಮ ಸಾಮರ್ಥ್ಯವನ್ನು ತೋರಿಸಿದರು. ಅವರ ನೆನಪಿಗಾಗಿ, ಭಾರತದಲ್ಲಿ ಸೆಪ್ಟೆಂಬರ್ 15 ಅನ್ನು ಇಂಜಿನಿಯರ್ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ. ಅವರು ಗಾಲಾ ಎಂದು ಉನ್ನತ ಗೌರವವನ್ನು ಪಡೆದಿರುತ್ತಾರೆ, ಅವರು ಭಾರತದ ಪ್ರಮುಖ ಎಂಜಿನಿಯರ್ ಆಗಿ ಪ್ರಸಿದ್ಧರಾಗಿದ್ದಾರೆ. ಮೈಸೂರಿನ ಕೃಷ್ಣ ರಾಜಸಾಗರ ಅಣೆಕಟ್ಟು ನಿರ್ಮಾಣದ ಜವಾಬ್ದಾರಿಯನ್ನು ಇವರು ಮುಖ್ಯ ಎಂಜಿನಿಯರ್ ಆಗಿ ನಿರ್ವಹಣೆ ಮಾಡಿರುತ್ತಾರೆ. ಜೊತೆಗೆ ಹೈದರಾಬಾದ್ ನಗರದ ಪ್ರವಾಹ ರಕ್ಷಣೆ ವ್ಯವಸ್ಥೆಯ ಪ್ರಧಾನ ವಿನ್ಯಾಸಕ ಆಗಿದ್ದಾರೆ.

ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಏಅಖಇ ಈಅಂಖಃ ಒಬ್ಬ ಮಹಾನ್ ಇಂಜಿನಿಯರ್, ವಿದ್ವಾಂಸ, ರಾಜನೀತಿಜ್ಞ ಮತ್ತು ಮೈಸೂರಿನ ದಿವಾನರಾಗಿದ್ದರು. ಅದರ ಯೋಜನೆ ಮತ್ತು ನಿರ್ಮಾಣದ ಸಮಯದಲ್ಲಿ, ಯೋಜನೆಯು ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದಾದ್ಯಂತ ಅಭೂತಪೂರ್ವವಾಗಿತ್ತು. ಅಣೆಕಟ್ಟು ನಿರ್ಮಾಣವು ತುಲನಾತ್ಮಕವಾಗಿ ಹೊಸ ಅನ್ವೇಷಣೆಯಾಗಿತ್ತು. ಸರ್ ಎಂ. ವಿಶ್ವೇಶ್ವರಯ್ಯನವರು 14 ಏಪ್ರಿಲ್ 1962 ರಂದು ತಮ್ಮ 101 ನೇ ವಯಸ್ಸಿನಲ್ಲಿ ನಿಧನರಾದರು.

ಕಟ್ಟಬೇಕು ಕರುನಾಡಿನ ದೀಪ
ಮೆಟ್ಟಬೇಕು ಕನ್ನಡ ನಾಡಿನ ಮಣ್ಣಿನ ಧೂಪ ॥
ಗಿರಿ ಗೋಪುರ ಕಂದರಗಳ ನಾಡು
ಹಸಿರದೇವತೆಯ ಸೊಬಗಿನ ಬೀಡು
ನಮ್ಮ ಚೆಲುವ ಕನ್ನಡ ನಾಡು ॥
ಕವಿರತ್ನಗಳ ತವರೂರಿನ ಸಿರಿ
ಸಾಹಿತ್ಯಗಳ ಸಿಂಚನ ಸ್ವರ್ಗದ ಪರಿ
ಕನ್ನಡದ ಸುಗಂಧವ ನೀ ಅರಿ ॥
ಉಸಿರನ್ನೇ ಹೊಸೆದು ಕನ್ನಡವ ಬೆಳಗಿಸು
ಕನ್ನಡವನ್ನೇ ಹಣತೆಯಾಗಿ ಪಸರಿಸು
ಅರಿಶಿಣ ಕುಂಕುಮದ ಸಂಕೇತವ ಅರಳಿಸು ॥
ಜ್ಞಾನಿಗಳಿಗೆ ಕನ್ನಡವೇ ಜೀವನಾಮೃತ
ಕರುನಾಡಿನ ಅಭಿಮಾನಿಗಳ ಹೃದಯನಮ್ರತ
ಆಸರೆಯಾಗಿ ಹೆಮ್ಮರವಾಗಿ ಬೆಳೆದ ಕನ್ನಡದ ಸೆಳೆತ
ನಮ್ಮ ಚೆಲುವ ಕನ್ನಡ ನಾಡಿನ ಮಿಡಿತ ॥



**ಶ್ರೀಮತಿ ಸೌಮ್ಯ ಎಸ್.ಬಿ**
ಕನ್ನಡ ಸಹಾಯಕ ಪ್ರಾಧ್ಯಾಪಕಿ



**ಕು. ನಿಶ್ಚಿತ್ ಎನ್**
ವಿದ್ಯುನ್ಮಾನ "ಬಿ"ವಿಭಾಗ
ಪ್ರಥಮ ವರ್ಷ

ಕಾಲ ನೀನೇಕೆ ಬೇಗ ಓಡುವೆ?
ತುಸು ಘಳಿಗೆ ನಿಲಲಾಗದೇ..
ಸಿಡಿಲಿನಂತೆ ಬಂದು, ಮಿಂಚಂತೆ ಮಾಯವಾಗಿ
ಪ್ರವಾಹದಂತಹ ಪರಿಣಾಮವ ಬೀರಿ
ಕೊನೆಗೆ ಹಿಡಿಯುವೆ ನಿನ್ನ ದಾರಿ

ಬೆಳದಿಂಗಳ ಅಂಗಳದಿ ತಾಯಿ ತುತ್ತು ತಿನಿಸುವಾಗ
ತಂದೆಯ ಹೆಗಲ ಮೇಲೆ ಕೂತು ಜಾತ್ರೆ ನೋಡುವಾಗ
ಅಜ್ಜಿ ಹಾಡು ಕತೆ ಹೇಳಿ ಮಲಗಿಸುವಾಗ
ಅಜ್ಜನ ಅನುಭವದ ಮಾತು ನಾ ಕೇಳುವಾಗ
ಕಾಲ, ನೀನೇಕೆ ಬೇಗ ಓಡುವೆ

ತೋಟದಿ ತಂಗಾಳಿ ನನ್ನನ್ನಾಲಂಗಿಸುವಾಗ
ಕೋಗಿಲೆಯ ಕೀರ್ತನೆಯ ನಾನಾಲಾಪಿಸುವಾಗ
ಗೆಳೆಯರ ಜೊತೆ ನಾ ನಕ್ಕು ನಲಿಯುವಾಗ
ಸುಂದರ ಕನಸ ನಾ ಕಾಣುವಾಗ
:ತುಸು ಘಳಿಗೆ ನಿಲಾಲಾಗದೇ...

ಕೃಷ್ಣನಂತೆ ನಿನ್ನ ತಡೆಯುವ ಮಿತ್ರ ನಾ ಹೊಂದಿಲ್ಲ
ಅರ್ಜುನನಂತೆ ನಿನ್ನ ನಿಲ್ಲಿಸುವ ಶಕ್ತಿಯೂ ನನಗಿಲ್ಲ
ಕೃಷ್ಣನ ಬುದ್ಧಿ, ಅರ್ಜುನನ ಶೌರ್ಯವೆರಡಿರಲಿ
ಬದುಕೆಂಬ ಕುರುಕ್ಷೇತ್ರದಿ, ಛಲದಿಂದ ಹೋರಾಡಿ
ಸಂಯಮದಿ ಸಂಭ್ರಮಿಸಬಹುದು

ಪುಟ್ಟ ಪೊರನಿಗೇನು ಗೊತ್ತು
ಸಮವಾದ ಸಮಯ ಎಲ್ಲರಿಗೆಂದು
ಕೂಡಿ ನಲಿಯಬಹುದೆಂದು,
ಉಪಯೋಗಿಸಿಗಳಿಸಬಹುದೆಂದು..
ಉಳ್ಳವನು ಅನುಭವದ ಕಲೆ
ತೊಟ್ಟಿರುವವನು ನೆನಪುಗಳ ಸರಮಾಲೆ... ಸವಿನೆನಪುಗಳ
ಸರಮಾಲೆ


ಅಂತಾಕ್ಷರಿ
[ Anthakshari ]
15.Dec.2023
: Venue : EC Seminor Hall
: Timings: 10:00am
Student Co-ordinators:
Nanda Kumar [MBA] : 89714 1710
Chandana - 7975712050


ಬೆಂಕಿಯಿಲ್ಲದೆ ಅಡುಗೆ
[ Cooking Without Fire ]
15.Dec.2023
: TBA
: TBA
Student Co-ordinators:
Ranjitha V - 944944753
Dinesh - 8074999746


ಹಾಸ್ಯ,ಕವನ,ನಾಟಕ
(Hasya, Kavana,Nataka)
15.Dec.2023
:TBA
:TBA
Student Coordinators
Nandan kumar - 6362565058
N Pavan kumar - 9113684942
Nanda Kumar [MBA] : 89714 1710
DRAMA


ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ
ಚಿರವಿನೂತನ
ರಂಗೋಲಿ ಸ್ಪರ್ಧೆ
ಸಂಯೋಜಕರು:
ಸಂಧ್ಯಾ: 9901479096
ಪುರುಷೋತ್ತಮ್: 9380970367
ಶಿಕ್ಷಕ ಸಂಯೋಜಕರು:
ಕಾರ್ತಿಕ. ಎಸ್


ಚಿತ್ರ ಕಲೆ
[ Drawing Competition ]
15.Dec.2023
: TBA
: TBA
Student Co-ordinator:
Pruthvi Raj - 9353633923


ನಿಧಿ ಬೇಟೆ
[Treasure Hunt]
15.Dec .2023
:TBA
:TBA
Student Coordinators
Shubash - 7022961827
Nithish - 9591380265
Jayanth - 8105587031


S J C Institute of Technology


S J C Institute of Technology






CKG 0802


















ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ
ಚಿರನೂತನ
ಕನ್ನಡ ರಾಜ್ಯೋತ್ಸವ
ರಾಷ್ಟ್ರಕವಿ ಕುವೆಂಪು 119ನೇ ಜನ್ಮದಿನಾಚರಣೆ








ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲ






ಚಿರವಿನೂತನ
119ನೇ ಜನ್ಮದಿನಾಚರಣೆ



























31-12-2023 ಭಾನುವಾರ ಪುಟ- 3

## ಕನ್ನಡ ರಾಜ್ಯೋತ್ಸವ ಹಾಗೂ ರಾಷ್ಟ್ರಕವಿ ಕುವೆಂಪು ರವರ 119ನೇ ಜನ್ಮದಿನಾಚರಣೆಯನ್ನು ವಿಜಯೋತ್ಸವ



ಚಿಕ್ಕಬಳ್ಳಾಪುರ: ನಗರದ ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ರಾಷ್ಟ್ರಕವಿ ಕುವೆಂಪು ರವರ 119ನೇ ಜನ್ಮದಿನಾಚರಣೆಯನ್ನು ವಿಜಯೋತ್ಸವ ಎಂದು ಚಿರವಿನೂತನ ಕನ್ನಡ ಸಂಘ, ಎಸ್.ಜೆ.ಸಿ.ಐ.ಟಿ ಸಹಯೋಗದೊಂದಿಗೆ ಆಚರಿಸಲಾಯಿತು.

[illegible]

ಕನ್ನಡಪ್ರಭ

## ವಿಶ್ವ ಮಾನವರನ್ನಾಗಿಸುವುದೇ ಶಿಕ್ಷಣದ ಗುರಿಯಾಗಬೇಕು

### ಕುವೆಂಪು ಜಯಂತಿಯಲ್ಲಿ ಶ್ರೀ ಮಂಗಳನಾಥ ಸ್ವಾಮೀಜಿ



ಚಿಕ್ಕಬಳ್ಳಾಪುರ: ಪ್ರತಿ ಮಗುವೂ ಹುಟ್ಟುತ್ತಲೇ ವಿಶ್ವಮಾನವ. ಆದರೆ ಬೆಳೆಯುವಾಗ ನಾವು ಆದನ್ನು ಅಲ್ಪಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡುವುದೇ ಶಿಕ್ಷಣದ ಉದ್ದೇಶವಾಗಬೇಕು ಎಂದು ಆದಿ ಚುಂಚನಗಿರಿ ಚಿಕ್ಕಬಳ್ಳಾಪುರ ಶಾಖಾ ಮಠದ ಕಾರ್ಯದರ್ಶಿ ಮಂಗಳನಾಥ ಸ್ವಾಮೀಜಿ ತಿಳಿಸಿದರು. ನಗರ ಹೊರವಲಯದ ಎಸ್ ಜೆಸಿಐಟಿ ಆವರಣದ ಬಿಜಿಎಸ್ ಸಭಾಂಗಣದಲ್ಲಿ ಎಸ್ ಜೆಸಿ ತಾಂತ್ರಿಕ ಮಹಾವಿದ್ಯಾಲಯ ಏರ್ಪಡಿಸಿದ್ದ ಕನ್ನಡರಾಜ್ಯೋತ್ಸವ ಹಾಗೂ ಕುವೆಂಪು ರವರ 119 ಜನ್ಮ ದಿನಾಚರಣೆಯ ಸಾನಿಧ್ಯವಹಿಸಿ ಆಶೀರ್ವಚನ ನೀಡಿ ಮಾತನಾಡಿದರು.

**ವಿಶ್ವ ಮಾನವನನ್ನಾಗಿ ಮಾಡಿ:** ಕುವೆಂಪುರವರು ತಿಳಿಸಿರುವಂತೆ ಹುಟ್ಟುವಾಗ ವಿಶ್ವಮಾನವನಾಗಿಯೇ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಜಾತಿ, ಮತ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು ಬುದ್ಧನನ್ನಾಗಿ, ಅಂದರೆ ವಿಶ್ವಮಾನವನನ್ನಾಗಿ, ಪರಿವರ್ತಿಸುವುದೆ ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು ಎಂದರು.ನಟ ಪ್ರದೀಪ್ ದೊಡ್ಡಯ್ಯ ಮಾತನಾಡಿ, ಕನ್ನಡಾಭಿಮಾನವೆಂದರೆ ಪೀಳಿಗೆಯಿಂದ ಪೀಳಿಗೆಗೆ ಕನ್ನಡತನ ಮತ್ತು ಕನ್ನಡ ಸಂಸ್ಕೃತಿಯನ್ನು ಕೊಂಡೊಯ್ಯುವ ಒಂದು ಪರಂಪರೆ. ಮಾನವರ ಬೌದ್ಧಿಕ ಬೆಳವಣಿಗೆಗೆ ಮಾತೃಭಾಷೆ ಅವಶ್ಯಕ ಎಂದರು.

ಚಲನಚಿತ್ರ ಗಾಯಕಿ ಡಾ.ಶಮಿತಾ ಮಲ್ನಾಡ್ ಮಾತನಾಡಿ, ಭಾಷೆಯ ಬಳಕೆ ನಮ್ಮ ಜೀವನದ ಅವಿಭಾಜ್ಯ ಅಂಗವಾಗ ಬೇಕು ಎಂದರು. ಬಳಿಕ ಕನ್ನಡ ಚಲನ ಚಿತ್ರ ಗೀತೆಗಳನ್ನು ಹಾಡಿದರು. ವೇಳೆ ಖ್ಯಾತ ತಮಟೆ ಕಲಾವಿದ ಪದ್ಮಶ್ರೀ ನಾಡೋಜ ಡಾ. ಮುನಿವೆಂಕಟಪ್ಪ ಮತ್ತು ರಾಜ್ಯೋತ್ಸವ ಪ್ರಶಸ್ತಿ ವಿಜೇತ ಮುಖವೀಣೆ ಕಲಾವಿದ ಮುಖವೀಣೆ ಆಂಜಿನಪ್ಪ ರವರನ್ನು ಸನ್ಮಾನಿಸಲಾಯಿತು.ಕಾರ್ಯಕ್ರಮದಲ್ಲಿ ನಟ ಹೃತಿಕಾ ಶ್ರೀನಿವಾಸ್, ಆದಿ ಚುಂಚನಗಿರಿಯ ಬಿಜಿಎಸ್ ಸಮೂಹ ಸಂಸ್ಥೆಗಳ ಮುಖ್ಯ ಆಡಳಿತಾಧಿಕಾರಿ ಡಾ.ಎನ್.ಶಿವರಾಮರೆಡ್ಡಿ, ಆಡಳಿತ ಮಂಡಳಿ ಸದಸ್ಯ ಡಾ.ಟಿ.ಮುನಿಕೆಂಚೇಗೌಡ,ಎಸ್ ಜೆಸಿಐಟಿ ಪ್ರಾಂಶುಪಾಲ ಡಾ.ಜಿ.ಟಿ.ರಾಜು, ರಿಜಿಸ್ಟ್ರಾರ್ ಸುರೇಶ್, ಮತ್ತಿತರರು ಇದ್ದರು.

KOLAR Edition
Dec 31, 2023 Page No. 02
Powered by : eReleGo.com

### ರಾಜ್ಯೋತ್ಸವ, ಕುವೆಂಪು ಜನ್ಮದಿನೋತ್ಸವದಲ್ಲಿ ಶ್ರೀ ಮಂಗಳನಾಥ ಸ್ವಾಮೀಜಿ ಬಣ್ಣನೆ

## ಕುವೆಂಪು ಸಾಹಿತ್ಯದಲ್ಲಿ ಆಧ್ಯಾತ್ಮವೂ ಅಡಗಿದೆ

■ **ವಿಕ ಸುದ್ದಿಲೋಕ** ಚಿಕ್ಕಬಳ್ಳಾಪುರ

ಹುಟ್ಟುವಾಗ ವಿಶ್ವಮಾನವರಾಗಿ ಹುಟ್ಟಿದ ಅನಂತರ ನಾವು ಅಲ್ಪಮಾನವರಾಗಿಬಿಡುತ್ತೇವೆ. ಆದರೆ ನಾವು ಸದಾ ವಿಶ್ವಮಾನವರಾಗೇ ಇರಬೇಕು ಎಂಬುದನ್ನು ಸಾರಿ ಹೇಳಿದ ಕುವೆಂಪು ಅವರ ಸಾಹಿತ್ಯದಲ್ಲಿ ಆಧ್ಯಾತ್ಮವೂ ಅಡಗಿದೆ ಎಂದು ಆದಿಚುಂಚನಗಿರಿ ಶಾಖಾ ಮಠಾಧೀಶ ಶ್ರೀ ಮಂಗಳನಾಥ ಸ್ವಾಮೀಜಿ ಹೇಳಿದರು.

ನಗರ ಹೊರವಲಯದ ಎಸ್‌ಜೆಸಿಐಟಿ ಸಭಾಂಗಣದಲ್ಲಿ ನಡೆದ ರಾಷ್ಟ್ರಕವಿ ಕುವೆಂಪು ಅವರ 119ನೇ ಜನ್ಮದಿನಾಚರಣೆ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕುವೆಂಪು ಅವರ ಸಾಹಿತ್ಯ ಮತ್ತು ಕವನಗಳಲ್ಲಿ ಸಾಮಾಜಿಕ ಕಳಕಳಿ ಅಡಗಿತ್ತು. ಅಲ್ಲದೇ ಸಮಾಜದಲ್ಲಿನ ಸುಧಾರಣೆಗಳ ಬಗ್ಗೆಯೂ ಅವರು ತಮ್ಮ ಸಾಹಿತ್ಯದಲ್ಲಿ ಬೆಳಕು ಚೆಲ್ಲುವ ಮೂಲಕ ಕ್ರಾಂತಿಕಾರಕ ಬದಲಾವಣೆಗಳನ್ನು ತರಲು ಕಾರಣವಾಗಿದ್ದಾರೆ ಎಂದು ಹೇಳಿದರು.

**ಎಲ್ಲೆಡೆ ಪಸರಿಸಿ:** ಕನ್ನಡಕ್ಕೆ ತನ್ನದೇ ಆದ ಇತಿಹಾಸವಿದೆ. ಭಾಷೆಯ ಸೊಗಡು ಅತ್ಯದ್ಭುತವಾಗಿದ್ದು, ಕನ್ನಡ ನಮ್ಮೆಲ್ಲರ ಉಸಿರಾಗಬೇಕಿದೆ. ಎಲ್ಲರೂ ಕನ್ನಡವನ್ನು ಉಳಿಸಿ ಬೆಳೆಸುವ ಸಂಕಲ್ಪ ಮಾಡಬೇಕು. ಅತ್ಯಂತ ಶ್ರೀಮಂತವಾಗಿರುವ ಕನ್ನಡ ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸುವಂತೆ ಮಾಡಬೇಕಿದೆ ಎಂದು ತಿಳಿಸಿದರು.



ಚಿಕ್ಕಬಳ್ಳಾಪುರ ಹೊರವಲಯದ ಎಸ್‌ಜೆಸಿಐಟಿ ಸಭಾಂಗಣದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಶ್ರೀ ಮಂಗಳನಾಥ ಸ್ವಾಮೀಜಿ ಮತ್ತಿತರರು ಉದ್ಘಾಟಿಸಿದರು.



ಚಿಕ್ಕಬಳ್ಳಾಪುರ ನಗರ ಹೊರವಲಯದ ಎಸ್‌ಜೆಸಿಐಟಿಯಲ್ಲಿ ನಡೆದ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಲಾ ತಂಡಗಳ ಪ್ರದರ್ಶನ ಗಮನ ಸೆಳೆಯಿತು.

### ಕನ್ನಡ ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸುವಂತಾಗಬೇಕು

### ಕನ್ನಡವನ್ನು ಉಳಿಸಿ ಬೆಳಸುವ ಸಂಕಲ್ಪ ಮಾಡಬೇಕು

ಖ್ಯಾತ ಚಲನಚಿತ್ರ ಗಾಯಕಿ ಡಾ. ಶಮಿತಾ ಮಲ್ನಾಡ್ ಕನ್ನಡದ ಬಗ್ಗೆ ಹಾಗೂ ಕುವೆಂಪು ಅವರ ಬಗ್ಗೆ ಕೆಲವು ಮಾತುಗಳನ್ನು ವಿದ್ಯಾರ್ಥಿನಿಯರಿಗೆ ತಿಳಿಸಿದರು. ಅಲ್ಲದೇ, ಕನ್ನಡದ ಹಾಡನ್ನು ಹಾಡುವ ಮುಖಾಂತರ ಕಾರ್ಯಕ್ರಮಕ್ಕೆ ಮೆರೆಗು ತಂದರು.

ಕಲಾವಿದ ಮುಖವೀಣೆ ಅಂಜಿನಪ್ಪ ಅವರು ತಮ್ಮ ಪ್ರತಿಭೆಯನ್ನು ತೋರುವ ಮೂಲಕ ಗಮನ ಸೆಳೆದರು. ತಮಟೆ ಕಲಾವಿದ ನಾಡೋಜ ಡಾ. ಮುನಿವೆಂಕಟಪ್ಪ ಅವರು ಪ್ರತಿಭೆಯನ್ನು ಪ್ರದರ್ಶಿಸಿದರು. ಇಬ್ಬರೂ ಕಲಾವಿದರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ನಟಿಯರಾದ ನಿಶ್ಚಿತ, ಹೃತಿಕಾ, ವಾಗ್ಮಿ ಪ್ರದೀಪ್ ದೊಡ್ಡಯ್ಯ, ಬಿಜಿಎಸ್ ಸಮೂಹ ಸಂಸ್ಥೆಗಳ ಮುಖ್ಯ ಆಡಳಿತಾಧಿಕಾರಿ ಡಾ.ಎನ್.ಶಿವರಾಮರೆಡ್ಡಿ, ಎಸ್‌ಜೆಸಿ ತಾಂತ್ರಿಕ ಮಹಾವಿದ್ಯಾಲಯ ಪ್ರಾಂಶುಪಾಲ ಜಿ.ಟಿ.ರಾಜು, ರಿಜಿಸ್ಟ್ರಾರ್ ಸುರೇಶ್, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಅತಿಥಿಗಳನ್ನು ಕಾರ್ಯಕ್ರಮದ ವೇದಿಕೆಗೆ ಸಾಂಪ್ರದಾಯಿಕ ಕಲೆಗಳ ಮೂಲಕ ತೆರೆದ ಜೀಪಿನಲ್ಲಿ ಅದ್ದೂರಿಯಾಗಿ ಸ್ವಾಗತಿಸಿ, ಕರೆತರಲಾಯಿತು. ನಾನಾ ವೇಷಭೂಷಣ ಧರಿಸಿದ್ದ ವಿದ್ಯಾರ್ಥಿಗಳು ಕನ್ನಡದ ಹಾಡುಗಳಿಗೆ ಕುಣಿದು ಕುಪ್ಪಳಿಸಿದರು.


ಎಸ್ ಜೆ ಸಿ ತಾಂತ್ರಿಕ ಮಹಾವಿದ್ಯಾಲಯ

